ಸಂಪುಟ : 8 ಸಂಚಿಕೆ : 154 ಪುಟ : 4 ಬೆಲೆ : 3.00 ಶುಕ್ರವಾರ ಜುಲೈ 21, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 154 Pages : 4 Price : 3.00 Friday July 21, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

■ವಿಜಯಸಾಕ್ಷಿ ಸುದ್ದಿ, ಗದಗ

2022-23ನೇ ಸಾಲಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಅನುಷ್ಠಾನ ಮಾಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ( www.sw.kar.nic.in ) ವೆಬ್‌ಸೈಟ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸುವ ಅವಧಿಯನ್ನು ಜುಲೈ 31ರವರೆಗೆ ವಿಸ್ತರಿಸಿ ಆನ್‌ಲೈನ್ ಮೂಲಕ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಸಹಾಯಕ ನಿರ್ದೇಶಕರಗಳ ಕಛೇರಿಗೆ ಸಂಪರ್ಕಿಸಬಹುದಾಗಿದೆ. ಸಹಾಯಕ ನಿರ್ದೇಶಕರ ಕಛೇರಿ ಗದಗ ದೂರವಾಣಿ ಸಂಖ್ಯೆ: 08372-297258/9480843128, ಸಹಾಯಕ ನಿರ್ದೇಶಕರ ಕಛೇರಿ ಮುಂಡರಗಿ ದೂರವಾಣಿ ಸಂಖ್ಯೆ: 08371-262449/9480843129, ಸಹಾಯಕ ನಿರ್ದೇಶಕರ ಶಿರಹಟ್ಟಿ ಕಛೇರಿ ದೂರವಾಣಿ ಸಂಖ್ಯೆ: 08487-242312/9480843132, ಸಹಾಯಕ ನಿರ್ದೇಶಕರ ರೋಣ ಕಛೇರಿ ದೂರವಾಣಿ ಸಂಖ್ಯೆ :08381-267120/9480843131, ಸಹಾಯಕ ನಿರ್ದೇಶಕರ ಕಛೇರಿ ನರಗುಂದ ದೂರವಾಣಿ ಸಂಖ್ಯೆ: 08377-245731/ 9480843130 ಗಳಿಗೆ ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

### ಮಾಸಿಕ ಎರಡು ಸಾವಿರ ರೂ. ಒದಗಿಸುವ ಗೃಹಲಕ್ಷ್ಮಿ ಯೋಜನೆ ನೋಂದಣಿ ಆರಂಭ-ಜಿಲ್ಲಾಧಿಕಾರಿ ವೈಶಾಲಿ.ಎಂ.ಎಲ್.

# ಅರ್ಹ ಫಲಾನುಭವಿಗಳು ಲಾಭ ಪಡೆಯಿರಿ

■ವಿಜಯಸಾಕ್ಷಿ ಸುದ್ದಿ, ಗದಗ

ಮಹಿಳೆಯರನ್ನು ಆರ್ಥಿಕ ಸಶಕ್ತರನ್ನಾಗಿ ಮಾಡುವ ಉದ್ದೇಶದಿಂದ ರಾಜ್ಯ ಸರ್ಕಾರದ ಪ್ರಮುಖ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಮಾಸಿಕ 2,000 ರೂ. ಒದಗಿಸುವ ಗೃಹ ಲಕ್ಷ್ಮಿ ಯೋಜನೆಯ ನೋಂದಣಿ ಪ್ರಕ್ರಿಯೆ ಗದಗ ಜಿಲ್ಲೆಯಲ್ಲಿ ಪ್ರಾರಂಭವಾಗಿದ್ದು, ಅರ್ಹ ಫಲಾನುಭವಿಗಳು ನೋಂದಣಿ ಮಾಡಿಕೊಂಡು ಇದರ ಲಾಭ ಪಡೆಯುವಂತೆ ಜಿಲ್ಲಾಧಿಕಾರಿ ವೈಶಾಲಿ.ಎಂ.ಎಲ್. ಅವರು ಮನವಿ ಮಾಡಿದ್ದಾರೆ.

ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ 282 ಗ್ರಾಮ ಒನ್/ಬಾಪೂಜಿ ಸೇವಾ ಕೇಂದ್ರಗಳನ್ನು ಹಾಗೂ ನಗರ ಪ್ರದೇಶಗಳಲ್ಲಿ 9 ಕರ್ನಾಟಕ ಒನ್ ಮತ್ತು 31 ಸ್ಥಳೀಯ ಸೇವಾ ಕೇಂದ್ರ ಒಟ್ಟು 322 ಕೇಂದ್ರಗಳನ್ನು ಗುರುತಿಸಲಾಗಿದ್ದು, ಸದರಿ ಕೇಂದ್ರಗಳಿಗೆ ತೆರಳಿ ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಅರ್ಜಿ ಸಲ್ಲಿಸಲು ಯಾವುದೇ ಸೇವಾ ಶುಲ್ಕ ನೀಡಬೇಕಿಲ್ಲ. ಇನ್ನು ಅರ್ಜಿ ಸಲ್ಲಿಕೆಗೆ ಯಾವುದೇ ಕಾಲಮಿತಿ ಇಲ್ಲ. ಹೀಗಾಗಿ ಆತಂಕ ಪಡುವ ಅಗತ್ಯವಿಲ್ಲ ಎಂದು



ಅವರು ಸ್ಪಷ್ಟಪಡಿಸಿದ್ದಾರೆ.

#### ಗೃಹಲಕ್ಷ್ಮಿ ಯೋಜನೆಗೆ ಯಾರು ಅರ್ಹರು

ಪಡಿತರ ಚೀಟಿಯಲ್ಲಿ ಯಜಮಾನಿ ಮಹಿಳೆ ಎಂದು ಗುರುತಿಸಿರುವ ಮಹಿಳೆ ಇದಕ್ಕೆ ಅರ್ಹರಾಗಿದ್ದಾರೆ. ಆದರೆ ಫಲಾನುಭವಿ ಯಜಮಾನಿ ಮಹಿಳೆ ಅಥವಾ ಆಕೆಯ ಪತಿ ಆದಾಯ ತೆರಿಗೆ ಅಥವಾ ಜಿ.ಎಸ್.ಟಿ. ಪಾವತಿದಾರರಾಗಿದ್ದಲ್ಲಿ ಯೋಜನೆ ವ್ಯಾಪ್ತಿಗೆ ಬರುವುದಿಲ್ಲ. ಇನ್ನು ಲಿಂಗತ್ವ




ಅಲ್ಪಸಂಖ್ಯಾತರು ಯೋಜನೆಯ ಲಾಭ ಪಡೆಯಲು ಅರ್ಹರಾಗಿದ್ದಾರೆ.

#### ನೋಂದಣಿ ಪ್ರಕ್ರಿಯೆ

ಫಲಾನುಭವಿ ನೋಂದಣಿ ಪ್ರಕ್ರಿಯೆ ಎರಡು ವಿಧಾನದ ಮೂಲಕ ಮಾಡಲಾಗುತ್ತಿದೆ. ಮೊದಲನೇಯದಾಗಿ ಈಗಾಗಲೇ ಪಡಿತರ ಚೀಟಿಯಲ್ಲಿ ▶▶3ನೇ ಪುಟಕ್ಕೆ

#### 2000 ರೂ. ಖಚಿತ

ಗ್ರಾಮ-ಒನ್, ಬಾಪೂಜಿ ಕೇಂದ್ರ, ಕರ್ನಾಟಕ ಒನ್ ಕೇಂದ್ರಗಳಲ್ಲಿ ನೋಂದಾಯಿಸಿಕೊಂಡಾಗ ಮಂಜೂರಾತಿ ಪತ್ರವನ್ನು ಸ್ಥಳದಲ್ಲಿಯೇ ನೀಡಲಾಗುತ್ತದೆ. ಪ್ರಜಾಪ್ರತಿನಿಧಿ ಮೂಲಕ ನೋಂದಾಯಿಸಿಕೊಂಡಲ್ಲಿ ಮಂಜೂರಾತಿ ಪತ್ರದ ನಂತರ ಮನೆಗೆ ತಲುಪಿಸಲಾಗುತ್ತದೆ. ಇದಲ್ಲದೆ ನೋಂದಣಿ ನಂತರ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್. ಮೂಲಕ ಮಂಜೂರಾತಿ ಬಗ್ಗೆ ಸಂದೇಶ ಸಹ ಬರಲಿದೆ. ನೋಂದಣಿ ನಂತರ ಆಧಾರ ಜೋಡಣೆಯಾಗಿರುವ ಫಲಾನುಭವಿಯ ಖಾತೆಗೆ ಡಿ.ಬಿ.ಟಿ. ಮತ್ತು ಆಧಾರ್ ಜೋಡಣೆಯಾಗದ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಮಾಹೆಯಾನ 2,000 ರೂ. ಗಳನ್ನು ಜಮೆ ಮಾಡಲಾಗುತ್ತದೆ.

## ಉಚಿತ ತರಬೇತಿಗೆ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕೆನರಾ ಬ್ಯಾಂಕ್ ದೇಶಪಾಂಡೆ ಆರಸೆಟಿ ದಾಂಡೇಲಿ ಹಾಗೂ ಟಾಟಾ ಮೋಟರ್ಸ ಧಾರವಾಡ ಇವರ ಜಂಟಿ ಸಹಯೋಗದಲ್ಲಿ 30 ದಿನಗಳ ಲಘು ವಾಹನಾ ಚಾಲನಾ ಉಚಿತ ತರಬೇತಿ ಹಮ್ಮಿಕೊಳ್ಳಲಾಗುವುದು. 20 ರಿಂದ 45 ವರ್ಷ ವಯೋಮಿತಿಯೊಳಗಿನ ಯುವಕರು ತಮ್ಮ ಹೆಸರು, ಹುಟ್ಟಿದ ದಿನಾಂಕ, ಪೂರ್ಣ ಪೋಸ್ಟಲ್ ವಿಳಾಸ, ಮೊಬೈಲ್ ಸಂಖ್ಯೆ, ವಿದ್ಯಾರ್ಹತೆ, ತರಬೇತಿಯ ಅವಶ್ಯಕತೆ ಈಗ ಮಾಡುತ್ತಿರುವ ಕೆಲಸ ಇತ್ಯಾದಿ ವಿವರಗಳನ್ನು ಒಳಗೊಂಡ ಅರ್ಜಿಯನ್ನು ಜುಲೈ 31 ರೊಳಗಾಗಿ ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟ್ ಕೇಂದ್ರ, ಹಸನಾಳ, ದಾಂಡೇಲಿ 581325 ಇಲ್ಲಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕೆನರಾ ಬ್ಯಾಂಕ್ ದೇಶಪಾಂಡೆ ಅರಸೆಟಿ ವಿಸ್ತರಣಾ ಕೇಂದ್ರ ಹಸನಾಳ, ದಾಂಡೇಲಿ-581325, ಫೊ.ನಂ- 08284-298547, 9632143217, 9449782425 ಇವರನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಕಾಲಮಿತಿಯೊಳಗೆ ಜನನ-ಮರಣ ನೋಂದಣಿ ಕಾರ್ಯ ಜರುಗಿಸಲು ಅಪರ ಡಿಸಿ ಸೂಚನೆ

# ನೋಂದಣಿ ವಿಳಂಬವಾದಲ್ಲಿ ಶಿಸ್ತು ಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಜನನ-ಮರಣ ನೋಂದಣಿ ವೈಯಕ್ತಿಕ ಅನುಕೂಲಗಳಿಗಾಗಿ ಹಾಗೂ ಸಾಮಾಜಿಕ ಸ್ಥಾನಮಾನಕ್ಕೆ ಸುರಕ್ಷತೆಯನ್ನು ಒದಗಿಸಲು ಅತಿ ಪ್ರಮುಖವಾದ ದಾಖಲೆಯಾಗಿದೆ. ಈ ನಿಟ್ಟಿನಲ್ಲಿ ಎಲ್ಲ ನೋಂದಣಾಧಿಕಾರಿಗಳು ಜನನ-ಮರಣ ನೋಂದಣಿಯನ್ನು ಕಾಲಮಿತಿಯೊಳಗಾಗಿಯೇ ದಾಖಲಿಸಬೇಕು. ತಪ್ಪಿದಲ್ಲಿ ಸಂಬಂಧಿಸಿದವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವದು ಎಂದು ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜರುಗಿದ ಜಿಲ್ಲಾ ಮಟ್ಟದ ಜನನ-ಮರಣ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನನ-ಮರಣ ಪ್ರಮಾಣ ಪತ್ರಗಳು ಅತಿ ಪ್ರಮುಖ ದಾಖಲೆಗಳಾಗಿದ್ದು, ಇವುಗಳ ಕುರಿತು ಮಾಹಿತಿಯನ್ನು ನೋಂದಣಿ ಮಾಡುವ ಮುನ್ನ ಕುಲಂಕೂಷವಾಗಿ ಪರಿಶೀಲನೆ ಮಾಡಬೇಕು ಎಂದರು. ನೋಂದಣಿಗಾಗಿ ನಿಯೋಜಿತ ನೋಂದಣಾಧಿಕಾರಿಗಳು ಪ್ರಮಾಣ ಪತ್ರಕ್ಕೆ ಸಹಿ ಮಾಡುವದರ ಮೂಲಕ ನೋಂದಣಿಗಾಗಿ ನಿಗದಿಪಡಿಸಲಾದ ತಂತ್ರಾಂಶದಲ್ಲಿ ಕಾಲಮಿತಿಯೊಳಗಾಗಿ ದಾಖಲಿಸಲು ಕ್ರಮ ಕೈಗೊಳ್ಳಬೇಕು.

> ಜನನ-ಮರಣ ನೋಂದಣಿ ಕಾರ್ಯವು ಗಂಭೀರ ವಿಷಯವಾಗಿದ್ದು, ಈ ಕಾರ್ಯದಲ್ಲಿ ನಿಯೋಜಿತ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉದಾಸೀನ ಮನೋಭಾವ ತೋರದೆ ಕಾಲಮಿತಿಯೊಳಗಾಗಿ ಕಾರ್ಯವನ್ನು ಪೂರ್ಣಗೊಳಿಸಿ.
>
> **-ಅನ್ನಪೂರ್ಣ**, ಅಪರ ಜಿಲ್ಲಾಧಿಕಾರಿಗಳು

ಜಿಲ್ಲೆಯಲ್ಲಿ ಜನನ-ಮರಣ ನೋಂದಣಿಯನ್ನು ಕಾಲಮಿತಿಯೊಳಗೆ ದಾಖಲಿಸಿ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ತಹಸೀಲ್ದಾರರು ಪ್ರತಿ ಮಾಹೆ ಸಭೆ ಜರುಗಿಸಿ ಸಭೆಯ ವರದಿಯನ್ನು ಜಿಲ್ಲಾಡಳಿತಕ್ಕೆ ತಪ್ಪದೇ ಸಲ್ಲಿಸಬೇಕು. ಹಾಗೂ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಕುರಿತು ತಮ್ಮ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಗೂ ಸಂಬಂಧಿಸಿದವರ ಜೊತೆಗೆ ನಿಯಮಿತವಾಗಿ ಸಮನ್ವಯ ಸಾಧಿಸಿ ನೋಂದಣಿ ಕಾರ್ಯಗಳನ್ನು ಕಾಲಮಿತಿಯೊಳಗಾಗಿ ದಾಖಲಿಸಲು ಕ್ರಮ ಕೈಗೊಳ್ಳಲು ತಿಳಿಸಿದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಎಂ.ಎ.ಕಂಬಾಳಿಮಠ ಮಾತನಾಡಿ,

## ಟ್ರಾವೆಲ್, ಟೂರಿಸ್ಟ್ ಗೈಡ್ ತರಬೇತಿಗೆ ಅರ್ಜಿ ಅಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕೆನರಾ ಬ್ಯಾಂಕ್ ದೇಶಪಾಂಡೆ ಅರ್‌ಸೆಟಿ ದಾಂಡೇಲಿಯಲ್ಲಿ 10 ದಿನಗಳ ಉಚಿತ ಟ್ರಾವೆಲ್ & ಟೂರಿಸ್ಟ ಗೈಡ್ ತರಬೇತಿ ಹಮ್ಮಿಕೊಳ್ಳಲಾಗುವುದು. 18 ರಿಂದ 45 ವರ್ಷ ವಯೋಮಿತಿಯೊಳಗಿನ ಯುವಕರು ಎಸ್ ಎಸ್ ಎಲ್ ಸಿ ಉತ್ತೀರ್ಣರಾದವರು ತಮ್ಮ ಹೆಸರು, ಹುಟ್ಟಿದ ದಿನಾಂಕ ಪೂರ್ಣ ಫೋಸ್ಟಲ್ ವಿಳಾಸ, ಮೊಬೈಲ್ ಸಂಖ್ಯೆ, ವಿದ್ಯಾರ್ಹತೆ ತರಬೇತಿಯ ಅವಶ್ಯಕತೆ ಈಗ ಮಾಡುತ್ತಿರುವ ಕೆಲಸ ಇತ್ಯಾದಿ ವಿವರಗಳನ್ನು ಒಳಗೊಂಡ ಅರ್ಜಿಯನ್ನು ಜುಲೈ 31ರ ಒಳಗಾಗಿ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಕೇಂದ್ರ, ಹಸನಾಳ, ದಾಂಡೇಲಿ 581325 ಇಲ್ಲಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕೆನರಾ ಬ್ಯಾಂಕ್ ದೇಶವಾಂಡೆ ಅರಸೆಟಿ ವಿಸ್ತರಣಾ ಕೇಂದ್ರ ಹಸನಮಾಳ, ದಾಂಡೇಲಿ-581325, ಫೋ.ನಂ- 08284-298547, 9632143217, 9449782425 ಇವರನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

## ಕಲ್ಮೇಶ್ವರ ಕಾಲೇಜು ಕಬಡ್ಡಿ ತಂಡ ರನ್ನರ್ ಅಪ್

■ವಿಜಯಸಾಕ್ಷಿ ಸುದ್ದಿ, ರೋಣ

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಹಾಗೂ ಸರಕಾರಿ ಪ್ರಥಮದರ್ಜೆ ಕಾಲೇಜು ಅಳ್ನಾವರ ಸಹಯೋಗದಲ್ಲಿ ಅಳ್ನಾವರ ಪ್ರಥಮದರ್ಜೆ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿದ್ದ ಕವಿವಿ ಅಂತರ್ ವಲಯ ಪುರುಷರ ಕಬಡ್ಡಿ ಪಂದ್ಯಾವಳಿಯಲ್ಲಿ ಹೊಳೆಆಲೂರಿನ ಶ್ರೀ ಕವಿಪ್ರ ಸಮಿತಿಯ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಕಬಡ್ಡಿ ತಂಡ ರನ್ನರ್ ಅಪ್ ಪ್ರಶಸ್ತಿ ಪಡೆದುಕೊಂಡಿದೆ.



ದಿ.18ರಂದು ನಡೆದ ಪಂದ್ಯದಲ್ಲಿ ಒಟ್ಟು 6 ತಂಡಗಳು ಭಾಗವಹಿಸಿದ್ದವು. ಇವುಗಳಲ್ಲಿ ಅಂತಿಮವಾಗಿ ಶಿರಸಿಯ ಸರಕಾರಿ ಪ್ರಥಮದರ್ಜೆ ಕಾಲೇಜು ತಂಡ ವಿಜೇತರಾದರೆ, ಶ್ರೀ ಕಲ್ಮೇಶ್ವರ ತಂಡ ರನ್ನರ್ ಅಪ್ ಸ್ಥಾನ ಪಡೆದುಕೊಂಡಿತು. ಕಲ್ಮೇಶ್ವರ ತಂಡದಲ್ಲಿ ನಾಯಕ ಶಿವು ಗಡದ, ತಂಡದ ಆಟಗಾರರಲ್ಲಿ ವಿನೋದ ಸಂದಿವುನಿ, ▶▶3ನೇ ಪುಟಕ್ಕೆ

## ಉಚಿತ ಯೋಗಾಸನ ಕ್ರೀಡಾ ತರಬೇತಿ ಶಿಬಿರ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಕ್ರೀಡಾ ಸಂಸ್ಥೆ(ರಿ) ಬೆಂಗಳೂರು ಇವರು ಡಾ. ನಾಗೂರ ಆಯುರ್ವೇದಿಕ್ ಮೆಡಿಕಲ್ ಕಾಲೇಜು ವಿಜಯಪೂರ ಇವರ ಸಹಯೋಗದಲ್ಲಿ ಜುಲೈ 29 ಮತ್ತು 30ರಂದು ವಿಜಯಪುರದಲ್ಲಿ ನಡೆಯುವ ಕರ್ನಾಟಕ ರಾಜ್ಯ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್ ಸ್ಪರ್ಧೆಗಳಲ್ಲಿ ಭಾಗವಹಿಸಲಿರುವ ಗದಗ ಜಿಲ್ಲಾ ಯೋಗಾಸನ ಕ್ರೀಡಾಪಟುಗಳಿಗೆ ಗದಗ ಜಿಲ್ಲಾ ಯೋಗ ಒಕ್ಕೂಟ ಮತ್ತು ಗದಗ ಜಿಲ್ಲಾ ಅಮೆಚೂರ್ ಯೋಗ ಕ್ರೀಡಾ ಸಂಸ್ಥೆ(ರಿ) ಗದಗ



ಇವರು ಒಂದು ವಾರದ ಕಾಲ ಉಚಿತ ಯೋಗಾಸನ ಕ್ರೀಡಾ ತರಬೇತಿ ಶಿಬಿರ ಆಯೋಜಿಸಿದ್ದಾರೆ.

ಶಿಬಿರವು ಜುಲೈ 22ರಿಂದ ಪ್ರತಿದಿನ ಬೆಳಿಗ್ಗೆ 7.30ರಿಂದ 9 ಗಂಟೆಯವರೆಗೆ ಸಿದ್ಧಲಿಂಗನ ನಗರದ ಬಸವ ಯೋಗ ಮಂದಿರ(ಬಸವಪ್ರಭೆ ಕ್ಯಾಂಪಸ್)ದಲ್ಲಿ ನಡೆಯುವುದು. ಯೋಗಾಚಾರ್ಯ ಕೆ ಎಸ್ ಪಲ್ಲೇದ ತರಬೇತಿ ನೀಡುವರು. ಆಸಕ್ತ ಯೋಗಾಸನ ಕ್ರೀಡಾಪಟುಗಳು ಈ ಶಿಬಿರದ ಪ್ರಯೋಜನ ಪಡೆಯಬೇಕೆಂದು ಗದಗ ಜಿಲ್ಲಾ ಯೋಗ ಒಕ್ಕೂಟ(ರಿ) ಸಂಸ್ಥೆಯ ಅಧ್ಯಕ್ಷ ಎಂ ಎಸ್ ಶಿರಿಯಣ್ಣವರ ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದು, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ-9448317188 ಸಂಪರ್ಕಿಸುವಂತೆ ಕೋರಿದ್ದಾರೆ.

## ಅಧಿಕಾರ ಸ್ವೀಕಾರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ಶಿವಪುತ್ರಪ್ಪ ಆರ್ ಹರಿಜನ ಅವರು ಮಂಗಳವಾರದಂದು ವಹಿಸಿಕೊಂಡಿರುತ್ತಾರೆ. ಅವರ ವೈಯಕ್ತಿಕ ಗಮನ ಸೆಳೆಯುವ ಪತ್ರಗಳನ್ನು ಶಿವಪುತ್ರಪ್ಪ ಆರ್ ಹರಿಜನ , ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ ,ನಂ.221, ಜಿಲ್ಲಾ ಆಡಳಿತ ಭವನ, ಗದಗ ದೂರವಾಣಿ ಸಂಖ್ಯೆ 08372-231398, ಮೊಬೈಲ್ ಸಂಖ್ಯೆ 9880163211 email.jd-gadag @karnatakaindustry.gov.in & iddicgadag@gmail.com ಇವರನ್ನು ಸಂಪರ್ಕಿಸಬಹುದಾಗಿದೆ.

## ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ಕುರಿ/ ಮೇಕೆ ಸಾಕಾಣಿಕೆ ಯೋಜನೆ, ವಲಸೆ/ ಅರೆ ವಲಸೆ ಕುರಿಗಾರರಿಗೆ ನೀಡಿರುವ ಸಂಚಾರಿ ಟೆಂಟ್ ( ಕಿಟ್ ) ಮತ್ತು ಇನ್ನಿತರೆ ಪರಿಕರಗಳ ವಿತರಣೆ ಯೋಜನೆ ಹಾಗೂ 2022-23ನೇ ಸಾಲಿನ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿ. ಬೆಂಗಳೂರು ಇದರಲ್ಲಿ ನೋಂದಣಿಯಾದ ಗದಗ ಜಿಲ್ಲೆಯ ಚಾಲ್ತಿಯಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಸದಸ್ಯತ್ವ ಹೊಂದಿರುವ 18 ರಿಂದ 60 ವರ್ಷ ವಯೋಮಿತಿಯೊಳಗಿನ ಮಹಿಳಾ ಮತ್ತು ಪುರುಷ ಕುರಿ/ ಮೇಕೆ ಸಾಕಾಣಿದಾರರು ಅರ್ಜಿಗಳನ್ನು ಜುಲೈ 27 ರೊಳಗೆ ಆಯಾ ತಾಲೂಕಿನ ಸಹಾಯಕ ನಿರ್ದೇಶಕರುಗಳಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು , ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿ, ಗದಗ ಪಶು ಆಸ್ಪತ್ರೆ ಆವರಣ ಗದಗ ಇವರನ್ನು ಕಚೇರಿ ವೇಳೆಯಲ್ಲಿ ( ದೂರವಾಣಿ ಸಂಖ್ಯೆ 9480131475, 9663570842) ಸಂಪರ್ಕಿಸಬಹುದಾಗಿದೆ.

## ಪೊಲೀಸರ ಮಿಂಚಿನ ಕಾರ್ಯಾಚರಣೆ: 67 ಬೈಕ್ ಜಪ್ತಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದಲ್ಲಿ ಗುರುವಾರ ಬೆಳ್ಳಂಬೆಳಿಗ್ಗೆ ರಸ್ತೆಗಿಳಿದು ಮಿಂಚಿನ ಕಾರ್ಯಾಚರಣೆ ನಡೆಸಿದ ಪೊಲೀಸರು ದೋಷಪೂರಿತ ಸೈಲೆನ್ಸರ್ ಅಳವಡಿಸಿದ್ದ 21 ಬೈಕುಗಳು, ಅಪ್ರಾಪ್ತರು ಚಲಿಸುತ್ತಿದ್ದ 46 ಸೇರಿ ಒಟ್ಟು 67 ಬೈಕುಗಳನ್ನು ವಶಪಡಿಸಿಕೊಂಡು ಬೇಕಾಬಿಟ್ಟಿ ಬೈಕ್ ಓಡಿಸುವ ಸವಾರರಿಗೆ ಎಚ್ಚರಿಕೆ ಮೂಡಿಸಿದರು.

ಬೆಳಿಗ್ಗೆ ಪಟ್ಟಣದ ಶಿಗ್ಲಿ ನಾಕಾ, ಗದಗ ರಸ್ತೆ, ಪಂಪವೃತ್ತ, ಸವಣೂರ ಕ್ರಾಸ್, ವಿದ್ಯಾರಣ್ಯ ವೃತ್ತ, ಆಸಾರ, ಭಾನು ಮಾರ್ಕೆಟ್ ಸೇರಿ ಎಲ್ಲ ಪ್ರಮುಖ ಮಾರ್ಗದಲ್ಲಿ ಬರುವ ಬೈಕ್ ಸವಾರರನ್ನು ಪರಿಶೀಲಿಸಿ ಅಪ್ರಾಪ್ತ ಮತ್ತು ಅಬ್ಬರದ ಸೌಂಡ್ ಮಾಡುವ ಸೈಲೆನ್ಸರ್ ಅಳವಡಿಸಿ ಬೇಕಾಬಿಟ್ಟಿ ಸಂಚರಿಸುವರನ್ನು ತಡೆದು ಬೈಕ್ ವಶಪಡಿಸಿಕೊಂಡರು.

ಜಿಲ್ಲಾ ಪೋಲೀಸ್‌ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಅವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಹಾಗೂ 3 ಜನ ಸಿಪಿಐ, 6 ಜನ ಪಿಎಸ್‌ಐ 50 ಕ್ಕೂ ಹೆಚ್ಚು ಪೊಲೀಸರು ವಿಶೇಷ ಕಾರ್ಯಚರಣೆ ನಡೆಸಿ ಸಂಚಲನ ಮೂಡಿಸಿದರು. ಗ್ಯಾರೇಜ್ ಮತ್ತು ಇತರೆ ಸ್ಥಳಗಳಲ್ಲಿ 5 ದೋಷಪೂರಿತ ಸೈಲೆನ್ಸರ್ ವಶಕ್ಕೆ ಪಡೆದುಕೊಳ್ಳಲಾಗಿದೆ.

ಈ ▶▶3ನೇ ಪುಟಕ್ಕೆ

## ಡಾ.ಮಂಜುನಾಥರ ಸೇವೆಯನ್ನು ವಿಸ್ತರಿಸಲು ಮನವಿ

■ವಿಜಯಸಾಕ್ಷಿ ಸುದ್ದಿ, ಗದಗ

ಬೆಂಗಳೂರಿನ ಜಯದೇವ ಹೃದಯರಕ್ತನಾಳದ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಹಿರಿಯ ತಜ್ಞ ವೈದ್ಯರಾದ ಡಾ. ಸಿ ಎನ್ ಮಂಜುನಾಥ ಅವರಿಗೆ ಕರ್ನಾಟಕ ರೂರಲ್ ಹೋಮಿಯೋಪತಿಕ್ ಮೆಡಿಕಲ್ ಪ್ರ್ಯಾಕ್ಟೀಷನರ್ ಅಸೋಸಿಯೇಶನ್‌ನ ನಿರ್ದೆಶಕ ಡಾ.ಮಹಾಂತೇಶ ಸಜ್ಜನರ ಪುಷ್ಪಗುಚ್ಛ ಅರ್ಪಿಸಿ ಅಭಿನಂದಿಸಿದರು.

ಜೀವಮಾನ ಸಾಧನೆಗಾಗಿ ವ್ಯಕ್ತಿ ಅಥವಾ ಸಂಸ್ಥೆಗೆ ರಾಜ್ಯ ಸರಕಾರ ನೀಡುವ ಪ್ರತಿಷ್ಠಿತ ಕೆಂಪೇಗೌಡ ಪ್ರಶಸ್ತಿಗೆ ಭಾಜನರಾದ ಡಾ.ಮಂಜುನಾಥ ಅವರ ಸೇವೆಯನ್ನು 6 ತಿಂಗಳ ಕಾಲ ಮುಂದುವರೆಸಿ ಸರಕಾರ ಆದೇಶ ನೀಡಿದ್ದು ಸ್ವಾಗತಾರ್ಹ. ಅವರ ಹಿರಿತನದ



ಸೇವೆಗೆ ಎಂಸಿಐ ಅನ್ವಯ 70ನೇ ವಯಸ್ಸಿನವರೆಗೂ ವೈದ್ಯಕೀಯ ಸೇವೆ ಸಲ್ಲಿಸಲು ಅವಕಾಶವಿದ್ದು, ಸರಕಾರ ಈ ನಿಟ್ಟಿನಲ್ಲಿ ಆಲೋಚಿಸಿ, ಡಾ.ಮಂಜುನಾಥರ ವೈದ್ಯಕೀಯ ಸೇವೆ ಇನ್ನೂ ಹೆಚ್ಚು ಜನರಿಗೆ ತಲುಪುವಂತೆ ಮಾಡಲು ಮುಖ್ಯಮಂತ್ರಿ ಸಿದ್ಧರಾಮಯ್ಯ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಅಗತ್ಯ ಕ್ರಮ ಜರುಗಿಸಬೇಕೆಂದು ಡಾ. ಮಹಾಂತೇಶ ಸಜ್ಜನರ ಮನವಿ ಮಾಡಿದ್ದಾರೆ.

## ಸಾಕ್ಷಿ ಸುಭಾಷಿತ

ನಾವು ಹೆಚ್ಚು ಹೆಚ್ಚು ಅಧ್ಯಯನ ಮಾಡಿದಂತೆಲ್ಲ
ನಮ್ಮ ಹೆಚ್ಚು ಹೆಚ್ಚು ಅಜ್ಞಾನ ಬೆಳಕಿಗೆ ಬರುತ್ತದೆ
–ಷೆಲ್ಲಿ

## ಸಂಪಾದಕೀಯ

# ಮಣಿಪುರದ ಸಹೋದರಿಯರಿಗೆ ನ್ಯಾಯ ಸಿಗಲಿ

ಭಾರತ ಪ್ರಕಾಶಿಸುತ್ತಿದೆ. ಕೆಲವೇ ದಿನಗಳಲ್ಲಿ ಚಂದ್ರನ ಮೇಲೆ ಕಾಲಿಡಲಿದ್ದೇವೆ. ಭಾರತ ವಿಶ್ವಗುರು, ಶಾಂತಿ ಮಂತ್ರ ಜಪಿಸುವ ರಾಷ್ಟ್ರ, ಹೆಣ್ಣನ್ನು ಪೂಜಿಸುವ ರಾಷ್ಟ್ರ ಎಂದೆಲ್ಲಾ ಹೇಳಿಕೊಳ್ಳುವ ನಾವೆಲ್ಲರೂ ತಲೆ ತಗ್ಗಿಸುವಂತಾಗಿದೆ.

ಮಣಿಪುರದ ಸಹೋದರಿಯರ ಮೇಲೆ ನಡೆದ ದೌರ್ಜನ್ಯ, ಅತ್ಯಾಚಾರ ಘಟನೆ ಜಗತ್ತಿನ ಮುಂದೆ ಭಾರತವೇ ತಲೆ ತಗ್ಗಿಸುವಂತಾಗಿದೆ. ಹೋರಾದ ಕಿಚ್ಚು ಒಡಲಲ್ಲೆ ಇಟ್ಟುಕೊಂಡಂತಿರುವ ಧೀರ ಮಹಿಳೆಯರ ನಾಡಿನ ಬುಡಕಟ್ಟು ಸಮುದಾಯದ ಆ ಸಹೋದರಿಯರು ಅನುಭವಿಸಿದ ಯಾತನೆ ಮನುಷ್ಯತ್ವವನ್ನು ಕೊಲೆ ಮಾಡಿದಂತಿದೆ.

ಮಣಿಪುರದಲ್ಲಿ ಬುಡಕಟ್ಟು ಸಹೋದರಿಯರ ಮೇಲೆ ನಡೆದ ದೌರ್ಜನ್ಯವನ್ನು ನಡೆಸಿದವರು ಇದೇ ನೆಲದ ದುರುಳರು. ಅವರ ಕೃತ್ಯಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ದೇಶಾದ್ಯಂತ ಜನ ಬುಡುಕಟ್ಟು ಸಹೋದರಿಯರ ಪರವಾಗಿ ನಿಂತಿದ್ದಾರೆ. ಲಕ್ಷಾಂತರ ಜನ ಬೀದಿಗಿಳಿದು ನ್ಯಾಯಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಮಣಿಪುರದ ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ಸಿಗುವ ವರೆಗೂ ಹೋರಾಟ ನಿಲ್ಲುವುದಿಲ್ಲ ಎನ್ನುವುದನ್ನು ಸರಕಾರಗಳು ಅರ್ಥ ಮಾಡಿಕೊಳ್ಳಬೇಕು.

ಮಣಿಪುರ ಹೋರಾಟದ ನೆಲ. ಎರಡು ದಶಕದ ಹಿಂದೆ ಸೇನೆಯ ಯೋಧರು ಇಬ್ಬರು ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದ್ದಾರೆ ಎಂದು ಆರೋಪಿಸಿ 12 ಜನ ಮಹಿಳೆಯರು ಬೆತ್ತಲೆಯಾಗಿ ಪ್ರತಿಭಟನೆ ನಡೆಸಿ ಇಡೀ ಜಗತ್ತಿನ ಗಮನ ಸೆಳೆದಿದ್ದರು. ಮಹಿಳೆಯರ ಹೋರಾಟದಿಂದಾಗಿ ಸೇಲೆ ಮಣಿಪುರದಿಂದ ಕಾಲ್ಕಿಳಬೇಕಾಯಿತು. ಅಲ್ಲದೇ ಮಾದಕದ್ರವ್ಯಕ್ಕೆ ಕಡಿವಾಣ, ಮಾನವ ಹಕ್ಕುಗಳ ಉಲ್ಲಂಘನೆ, ಭ್ರಷ್ಟಾಚಾರ, ಪೌರತ್ವ ವಿಧೇಯಕ ಹೀಗೆ ನಾನಾ ಸಂದರ್ಭದಲ್ಲಿ ಮಣಿಪುರದ ಮಹಿಳೆಯರು ನಡೆಸಿದ ಒಗ್ಗಟ್ಟಿನ ಹೋರಾಟ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಮಣಿಪುರದಲ್ಲಿ ಯಾವುದೇ ಪ್ರತಿಭಟನೆ ನಡೆದರೂ ಅದು ಮಹಿಳಯರ ನೇತೃತ್ವದಲ್ಲೆ ನಡೆದಿರುವುದು ವಿಶೇಷ. ನಾಗರಿಕ ಹಕ್ಕು ಹೋರಾಟಗಾರ್ತಿ ಇರೋಂ ಶರ್ಮಿಳಾ ಸಹ ಮಣಿಪುರದ ನೆಲದ ಮಹಿಳೆ. ಇಂಥ ಧೀರ ನಾಡಿನ ಬುಡಕಟ್ಟು ಸಮುದಾಯದ ಸಹೋದರಿಯರಿಗೆ ಆದಷ್ಟು ಬೇಗ ನ್ಯಾಯ ಸಿಗಲಿ.

## ಕವನ

# ಬಾರೋ ಮಳೆರಾಯ ನಮ್ಮೂರಿಗೆ



ಬಾರೋ ಮಳೆರಾಯ ನಮ್ಮೂರಿಗೆ
ಹಠ ಮಾಡದೆ ಬಾರೋ ನಮ್ಮೂರಿಗೆ
ನಿನ್ನ ನೆನಪಿನಲ್ಲಿ ಕುಳಿತಿರುವರು ಚಿಣ್ಣರು
ನಿನಗಾಗಿ ಕಾಯುವವರು ನೂರಾರು ರೈತರು...

ನಿನಗೆ ಯಾಕೆ ಬಂತು ಇಷ್ಟೊಂದು ಕೋಪ
ನಿನಗೆ ಯಾರ ಮೇಲೆ ಬಂದಿತು ಈ ತಾಪ
ಸದಾ ನಿನ್ನ ನಂಬಿದ ಜನರ ಗತಿಯೇನು
ಸದಾ ದೇವರಂತೆ ಪೂಜಿಸುವರ ಹಿತವೇನು...

ಹಚ್ಚ ಹಸಿರಾಗಿದ್ದ ನೆಲವು ಈಗ ಒಣಗಿದೆ
ನಿತ್ಯವು ನಿನ್ನ ಕಣ್ಣೀರಿನ ಗಾಯನವಾಗಿದೆ
ನೀ ನಮ್ಮ ಸಮಯಕ್ಕೆ ಸರಿಯಾಗಿ ಬರಲಿಲ್ಲ
ನೀನು ಕೈ ಬಿಟ್ಟರು ಭೂಮಿ ತಾಯಿ ಕೈ ಬಿಡುವುದಿಲ್ಲ...

ಬಂದರೆ ಒಮ್ಮೆಲೇ ಬಿರುಗಾಳಿಯಂತೆ ಬಂದ ಬಿಡ್ತೀ ನೀ
ಹೋದರೆ ಮತ್ತೆ ತಿರುಗಿ ನೋಡುವುದಿಲ್ಲ ನಮ್ಮನ್ನ ನೀ
ನೀ ಬೇಗನೆ ಬಾ ಅದರೆ ಬರುವಾಗ ಸ್ವಲ್ಪ ಇರಲಿ ನಿಧಾನ
ನೀ ಬರುವ ಹೊತ್ತು ಬಿತ್ತನ್ನು ನೋಡುವರು ಊರಜನ...

ಬೇಸಿಗೆಯಲ್ಲಿ ಯಾರು ನಿನ್ನನ್ನು ನೆನಪಿಸುದಿಲ್ಲ
ಮಳೆಗಾಲದಲ್ಲಿ ನಿನ್ನ ನೆನಪು ಎಲ್ಲರ ಮನದಲ್ಲಿ
ನಮ್ಮನ್ನ ನೀನು ಹೊರಗೆ ಹೋಗಲು ಬಿಡುವುದಿಲ್ಲ
ಹೋದರೆ ಮತ್ತೆ ಮನೆ ಸೇರುವುದು ಗ್ಯಾರಂಟಿ ಇಲ್ಲ...

– ಸಿ ಆರ್ ಗಡಾದ, ಗದಗ.

# ಬದುಕು ಮುಗಿಸಿದ ನನ್ನವ್ವ

ಇಂದು ಈ ದಿನ ಬದುಕು ಮುಗಿಸಿದ ನನ್ನವ್ವ
ಎಂದಿಗೂ ಬದುಕಲ್ಲಿ ನಿನ್ನಂತೆ ಯಾರಿಲ್ಲ ನನ್ನವ್ವ
ನಮ್ಮನ್ನ ಪ್ರೀತಿಯಿಂದ ನೋಡು ಬಾ ನನ್ನವ್ವ
ನಮ್ಮನ್ನು ಮುದ್ದಿಸುತ ನಗೆಸು ಬಾ ನನ್ನವ್ವ...

ಒಂಬತ್ತು ತಿಂಗಳು ಹೆತ್ತು ಹೊತ್ತು ಸಾಕಿ ಸಲುಹಿ
ಪ್ರತಿ ದಿನವು ಈ ಬೆಳಕಿನಲ್ಲಿ ಉಣಿಸಿದವಳು ಸಿಹಿ
ನಡೆಯುವ ದಾರಿಯ ಉದ್ದಗಲಕ್ಕೂ ಪ್ರೀತಿ
ಕಷ್ಟ ನಷ್ಟದ ದಿನಗಳಲ್ಲಿ ಮರೆಯಲಿಲ್ಲ ನೀತಿ...

ಎಂಬತ್ತರ ಹಿರಿಯ ಗಟ್ಟಿ ಜೀವ ಇವರು
ಎಂದು ಯಾವುದಕ್ಕೂ ಜಗ್ಗದೆ ಬಗ್ಗದವರು
ಇಂದು ಮನೆಯ ಸುತ್ತಲೂ ಕತ್ತಲು ಆವರಿಸಿತು
ಮನೆ ಮಂದಿಗೆಲ್ಲ ಗರ ಸಿಡಿಲು ಬಡಿದಂತಾಯಿತು...

ಹತ್ತ ಮಕ್ಕಳನ್ನು ಸಸಿಯಂತೆ ಗಿಡದಂತೆ ಬೆಳೆಸಿದವರು
ನನ್ನ ಮಕ್ಕಳೆ ನನ್ನ ಪ್ರೀತಿಯ ಆಸ್ತಿ ಎಂದರು ಇವರು
ಈಗ ಅವರು ಹಾಕಿದ ಮಾರ್ಗದಲ್ಲಿ ನಾವೆಲ್ಲರು
ಇದೀಗ ಎಲ್ಲರ ಕಣ್ಣಲ್ಲಿ ಜಾರಿತು ಕಣ್ಣೀರು.



ದೂರದ ಬಂದು ಬಳಗದವರ ಆಗಮನ
ದುಃಖ ಸಾಗರದಲ್ಲಿ ತುಂಬಿತು ಜನ
ಎಲ್ಲರು ಸಲ್ಲಿಸಿದರು ನಮನಗಳು
ಭಾವಪೂರ್ಣ ಪುಷ್ಪ ನಮನಗಳು.

–ಸಿ. ಆರ್. ಗಡಾದ ಗದಗ

# ಕ್ಷುಲ್ಲಕ ಕಾರಣಕ್ಕೆ ಗುದ್ದಲಿಯಿಂದ ತಲೆಗೆ ಹೊಡೆದು ತಂದೆಯನ್ನೇ ಕೊಂದ ಮಗಳು!

■ವಿಜಯಸಾಕ್ಷಿ ಸುದ್ದಿ, ರಾಮನಗರ

ಕ್ಷುಲ್ಲಕ ಕಾರಣಕ್ಕೆ ಮಗಳೊಬ್ಬಳು ತನ್ನ ತಂದೆಯನ್ನೇ ಕೊಂದಿರುವ ಆಘಾತಕಾರಿ ಘಟನೆ ರಾಮನಗರ ಜಿಲ್ಲೆಯಲ್ಲಿ ನಡೆದಿದೆ.

ಮೃತನನ್ನು ಹುಚ್ಚೀರಯ್ಯ(68) ಎಂದು ಗುರುತಿಸಲಾಗಿದೆ. ಕೊಲೆ ಮಾಡಿದ ಮಗಳನ್ನು ಪುಷ್ಪ (30) ಎಂದು ಗುರುತಿಸಲಾಗಿದೆ. ಆಕೆ ಸ್ಥಳದಿಂದ ನಾಪತ್ತೆಯಾಗಿದ್ದಾಳೆ.

## 14 ವರ್ಷಗಳಲ್ಲಿ ಹಲವು ಪ್ರವಾಹ, ಭೂಕುಸಿತಗಳಿಗೆ ಸಾಕ್ಷಿಯಾದ ಮಲೆನಾಡು

# ಮತ್ತೆ ಭಯ ಮೂಡಿಸುತ್ತಿದೆ ಮಳೆಗಾಲ



ಇನ್ನೇನು ಮಳೆಗಾಲ ತಡವಾಗಿಯಾದರೂ ಪ್ರಾರಂಭವಾಗುವ ಲಕ್ಷಣಗಳು ಕಾಣಿಸುತ್ತಿವೆ. ಈ ಬಾರಿ ಮಳೆಗಾಲವೇ ಇಲ್ಲವೇನೋ ಎಂದು ಕಂಗಾಲಾಗಿದ್ದ ರೈತ ಸಮೂಹ, ತಡವಾಗಿಯಾದರೂ ಅಷ್ಟಿಷ್ಟು ಮಳೆಯಾಗುತ್ತಿರುವ ಬಗ್ಗೆ ನೆಮ್ಮದಿಯಲ್ಲದಿದ್ದರೂ ನಿಟ್ಟುಸಿರಾಗುತ್ತಿದ್ದಾರೆ. ಬೆನ್ನಲ್ಲೇ, ಪ್ರತೀ ಬಾರಿ ಮಳೆಗಾಲ ಪ್ರಾರಂಭವಾಗುತ್ತಿರುವಂತೆಯೇ ಕೊಡಗು, ಚಿಕ್ಕಮಗಳೂರು, ಉತ್ತರಕನ್ನಡವೂ ಸೇರಿದಂತೆ ಮಳೆನಾಡಿನ ಹಲವು ಗ್ರಾಮವಾಸಿಗಳಿಗೆ ಕಾಡುವ ಶೂನ್ಯ 'ಈ ಬಾರಿ ಪ್ರವಾಹ ಬರಬಹುದಾ? ಭೂಕುಸಿತವಾಗಬಹುದಾ?'. ಚಿಂತಿಸುವ ಅಗತ್ಯವೇನಿಲ್ಲ. ಯಾಕೆಂದರೆ, ಈ ಬಾರಿಯಲ್ಲ, ಕಳೆದ 14 ವರ್ಷಗಳಿಂದಲೂ ಮಲೆನಾಡು, ಕರಾವಳಿ ಪ್ರದೇಶಗಳು ಮತ್ತು ರಾಜ್ಯದ ನಾಲ್ಕು ಪ್ರಮುಖ ನದಿ ಜಲಾನಯನ ಪ್ರದೇಶಗಳು ಒಂಬತ್ತು ವರ್ಷಗಳಲ್ಲಿ ಪ್ರವಾಹ, ಭೂಕುಸಿತಕ್ಕೆ ಸಾಕ್ಷಿಯಾಗಿವೆ.

> ಪಶ್ಚಿಮ ಘಟ್ಟಗಳು ಮತ್ತು ಕರಾವಳಿ ಪ್ರದೇಶಗಳಲ್ಲಿ ಕೈಗೊಳ್ಳಲಾಗುತ್ತಿರುವ ಅವೈಜ್ಞಾನಿಕ ನಿರ್ಮಾಣ ಆಧಾರಿತ ಅಭಿವೃದ್ಧಿ ಕಾರ್ಯಗಳು ಪ್ರವಾಹ, ಭೂಕುಸಿತಕ್ಕೆ ಪ್ರಮುಖ ಕಾರಣಗಳಾಗಿವೆ. ಅರಣ್ಯ ಇಲಾಖೆ ಮತ್ತು ರೈತರು ಕೃಷಿಗಾಗಿ ಪರಿಸರಕ್ಕೆ ಹಾನಿಕಾರಕ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮರಗಳನ್ನು ಕಡಿದು ಅರಣ್ಯ ನಾಶ ಮಾಡುತ್ತಿದ್ದಾರೆ. ಇದಲ್ಲದೆ, ಈಗಾಗಲೇ ಭೂಕುಸಿತ ಸಂಭವಿಸುತ್ತಿರುವ ಸ್ಥಳಗಳಲ್ಲಿ ದೃಢವಾದ ಮತ್ತು ಕಾಲಮಿತಿಯ ಪುನಃಸ್ಥಾಪನೆ ಕಾರ್ಯಗಳನ್ನು ತರಲು ಸರ್ಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ.
>
> – ಡಾ.ಕೇಶವ್ ಎಚ್ ಕೊರ್ಸೆ.
> ಭೂಕುಸಿತ ಅಧ್ಯಯನ ಸಮಿತಿಯ ಸದಸ್ಯ.

> ಜಿಲ್ಲೆಯಲ್ಲಿ 137 ಭೂಕುಸಿತ ಪೀಡಿತ ಪ್ರದೇಶಗಳನ್ನು ಗುರುತಿಸಲಾಗಿದೆ. ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿಯು ಕಳೆದ 14 ವರ್ಷಗಳಲ್ಲಿ ಸಂಗ್ರಹಿಸಿದ ದತ್ತಾಂಶಗಳಿಂದ ಯೋಜನೆಗಳನ್ನು ರೂಪಿಸಿದೆ. ಭೂಕುಸಿತ ಮತ್ತು ಪ್ರವಾಹಕ್ಕಾಗಿ 47 ಗ್ರಾಮ ಪಂಚಾಯಿತಿಗಳ ಒಟ್ಟು 77 ಗ್ರಾಮಗಳು ಹೆಚ್ಚುವರಿ ಮಳೆಯ ಸಮಯದಲ್ಲಿ ಜಾಗರೂಕರಾಗಿರಬೇಕು. ಯಾವುದೇ ವಿಪತ್ತನ್ನು ಎದುರಿಸಲು ಆಡಳಿತವು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿದೆ.
>
> – ಕೆ ಎನ್ ರಮೇಶ್.
> ಚಿಕ್ಕಮಗಳೂರು ಜಿಲ್ಲಾಧಿಕಾರಿ.

ಕರ್ನಾಟಕ ರಾಜ್ಯ ಪ್ರವಾಹ ಅಪಾಯ ನಿರ್ವಹಣಾ ಕ್ರಿಯಾ ಯೋಜನೆ 2022ರ ಪ್ರಕಾರ, 2018 ಮತ್ತು 2021ರ ನಡುವೆ, ಪ್ರವಾಹದಿಂದಾಗಿ ರಾಜ್ಯವು 248 ಜೀವಗಳನ್ನು ಕಳೆದುಕೊಂಡಿದೆ. 2.18 ಲಕ್ಷ ಮನೆಗಳಿಗೆ ಹಾನಿಯಾಗಿದೆ. ಈ ಮೂರು ವರ್ಷಗಳಲ್ಲಿ ಬೆಳೆ ನಷ್ಟ, ಜಾನುವಾರುಗಳ ಸಾವು ಮತ್ತು ರಸ್ತೆ, ಸೇತುವೆ, ಕೆರೆ, ಸರ್ಕಾರಿ ಕಟ್ಟಡಗಳ ಹಾನಿಯಿಂದಾಗಿ ರಾಜ್ಯವು 78,575 ಕೋಟಿ ರೂ.ಗಳ ನಷ್ಟವನ್ನು ಅನುಭವಿಸಿದೆ. ರಾಜ್ಯದ ಭೌಗೋಳಿಕ ಪ್ರದೇಶದ 80%ರಷ್ಟು 15 ವರ್ಷಗಳ ಕಾಲ ಬರದಿಂದ ಬಾಧಿತವಾಗಿದೆ. ಕಳೆದ ವರ್ಷ, 2022ರಲ್ಲಿ ರಾಜ್ಯದಲ್ಲಿ ಸುರಿದ ಕುಂಭದ್ರೋಣ ಮಳೆಯ ಪರಿಣಾಮವಾಗಿ ಎಲ್ಲಾ 31 ಜಿಲ್ಲೆಗಳು ಪ್ರವಾಹದಿಂದ ಬಳಲಿವೆ. 2021ರಲ್ಲಿ 28 ಜಿಲ್ಲೆಗಳು ಪ್ರವಾಹಕ್ಕೆ ಸಾಕ್ಷಿಯಾದವು. 2020ರಲ್ಲಿ 25 ಜಿಲ್ಲೆಗಳು ಮತ್ತು 2019ರಲ್ಲಿ 23 ಜಿಲ್ಲೆಗಳು ಪ್ರವಾಹದಿಂದ ತತ್ತರಿಸಿಹೋದವು. 2010ರ ಮಳೆಗಾಲವೇ ಭೂಕುಸಿತಗಳಿಲ್ಲದ ಕೊನೆಯ ವರ್ಷ.

ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಳೆದ 14 ವರ್ಷಗಳಲ್ಲಿ ಸಾಕಷ್ಟು ಭೂಕುಸಿತಗಳು ಸಂಭವಿಸಿವೆ. ಶಿವಮೊಗ್ಗ ಮತ್ತು ಚಿಕ್ಕಮಗಳೂರಿನಲ್ಲಿ 2009 ಮತ್ತು 2022ರ ನಡುವೆ ಏಳು ಬಾರಿ ಭೂಮಿ ಕುಸಿದಿದೆ. ಕೊಡಗು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳ 28 ತಾಲೂಕುಗಳನ್ನು ಭೂಕುಸಿತ ಪೀಡಿತ ಪ್ರದೇಶಗಳೆಂದು ಗುರುತಿಸಲಾಗಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಕೃಷ್ಣಾ ನದಿಯಂಚಿನ 1,725 ಗ್ರಾಮಗಳು, ಕಾವೇರಿ, ಗೋದಾವರಿ ಮತ್ತು ಪಶ್ಚಿಮಾಭಿಮುಖವಾಗಿ ಹರಿಯುವ ನದಿ ಪಾತ್ರಗಳನ್ನು ಪ್ರವಾಹ ಪೀಡಿತವೆಂದು ಗುರುತಿಸಲಾಗಿದೆ. ಇವುಗಳಲ್ಲಿ ಹೆಚ್ಚಿನ ಸ್ಥಳಗಳಲ್ಲಿ ಯಾವುದೇ ನಿಯಮಗಳನ್ನು ಪಾಲಿಸದೇ ಗುಡ್ಡ ಪ್ರದೇಶಗಳನ್ನು ಅವೈಜ್ಞಾನಿಕವಾಗಿ ಅಗೆದಿರುವುದೇ ಹೆಚ್ಚಿನ ಭೂಕುಸಿತಕ್ಕೆ ಕಾರಣವೆಂಬುದು ನಗ್ನ ಸತ್ಯ.

ಕೊಡಗು ಜಿಲ್ಲಾಧಿಕಾರಿ ಸತೀಶ ಬಿ ಸಿ, ಭೂಕುಸಿತ ಪೀಡಿತ 42 ಪ್ರದೇಶಗಳನ್ನು ಗುರುತಿಸಲಾಗಿದ್ದು, ಭೂಕುಸಿತದಿಂದ ಬಾಧಿತರಾದವರಿಗೆ ನೋಟಿಸ್ ನೀಡಲಾಗಿದೆ. ಸ್ವಯಂಸೇವಕರ ಸಹಾಯದಿಂದ, ನಾವು ರಕ್ಷಣಾ ಕಾರ್ಯವನ್ನು ಕೈಗೊಳ್ಳುತ್ತೇವೆ. ಅಗತ್ಯವಿರುವ ಸಮಯದಲ್ಲಿ ಕಾರ್ಯಪ್ರವೃತ್ತರಾಗಲು ನಾವು ಜೆಸಿಬಿ ಯಂತ್ರಗಳು ಮತ್ತು ಇತರ ಭೂಮಿ ಅಗೆಯುವ ಯಂತ್ರಗಳನ್ನು ನಿಲ್ಲಿಸಿದ್ದೇವೆ. ವಿಪತ್ತು ನಿರ್ವಹಣಾ ಪರಿಕರಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ಹೊಂದಿಸಿಕೊಂಡು ಸಿದ್ಧರಾಗಿದ್ದೇವೆ ಎಂದಿದ್ದಾರೆ.

## ಶಾಲಾ ಸಂಸತ್ ರಚನೆ–ಪ್ರಮಾಣ ವಚನ ಭೋಧನೆ

# ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಯಲಿ

■ವಿಜಯಸಾಕ್ಷಿ ಸುದ್ದಿ, ಗದಗ



ವಿದ್ಯಾರ್ಥಿ ದೆಸೆಯಲ್ಲಿಯೇ ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸುವ ಮೂಲಕ ಉತ್ತಮ ಮೌಲ್ಯಗಳು, ಆದರ್ಶದ ಅನುಕರಣೆ, ದೇಶಾಭಿಮಾನ ಮೂಡಿಸಿ ಪ್ರಜಾಪ್ರಭುತ್ವ ಪದ್ಧತಿಯನ್ನು ಮಕ್ಕಳು ಅರಿತುಕೊಳ್ಳಲು ಶಾಲಾ ಸಂಸತ್ತು ಪೂರಕವಾಗಿದೆ ಎಂದು ಗದಗ ಜಿಲ್ಲಾ ಡೈಟ್‌ನ ಉಪನ್ಯಾಸಕರಾದ ಮಂಗಳಾ ತಾಪಸ್ಕರ್ ಹೇಳಿದರು.

ಅವರು ಗದುಗಿನ ಸಿ.ಎಸ್.ಪಾಟೀಲ ಬಾಲಕಿಯರ ಪ್ರೌಢಶಾಲೆಯಲ್ಲಿ ಜರುಗಿದ ಶೈಕ್ಷಣಿಕ ಸಾಲಿನ ಸಂಸತ್ತನ್ನು ಉದ್ಘಾಟಿಸಿ ಮಾತನಾಡಿದರು. ಮಕ್ಕಳಿಗೆ ಚುನಾವಣೆಯ ತಿಳುವಳಿಕೆ, ವಿವಿಧ ಖಾತೆಗಳ ಕಾರ್ಯವೈಖರಿ, ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳ ಮಹತ್ವ ಮುಂತಾದವುಗಳನ್ನು ತಿಳಿಯುವಲ್ಲಿ ಸಹಕಾರಿಯಾಗಲಿದೆ ಎಂದರು.

ನೂತನ ಸಂಸತ್ತಿನ ಮಂತ್ರಿ ಮಂಡಲಕ್ಕೆ ಪ್ರಮಾಣವಚನ ಬೋಧಿಸಿದ ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಂಪನ್ಮೂಲ ವ್ಯಕ್ತಿ ಕೆ.ಎಸ್.ಬೇಲೇರಿ ಮಾತನಾಡಿ, ಶಾಲೆಗಳಲ್ಲಿ ನಡೆಯುವ ಚುನಾವಣೆಗಳು ವಿದ್ಯಾರ್ಥಿಗಳಿಗೆ ಜವಾಬ್ದಾರಿಯನ್ನು ವಹಿಸುತ್ತವೆ. ಮಕ್ಕಳು ಚುನಾವಣೆ ಕುರಿತಾಗಿ ತಾಳಿರುವ ಕುತೂಹಲವನ್ನು ಇಲ್ಲಿ ನೈಜವಾಗಿ ಕಂಡುಕೊಂಡು ಸಂತಸ ಪಡುತ್ತಾರೆ. ನಾಯಕತ್ವ ಗುಣವು ಇಂದಿನ ಮಕ್ಕಳಿಗೆ ಅವಶ್ಯಕವಾಗಿದೆ ಎಂದರು.


ಪ್ರಾಸ್ತಾವಿಕವಾಗಿ ಮಾತನಾಡಿದ ಶಿಕ್ಷಕ ಐ.ಎಸ್.ಗೌಡರ, ಮಕ್ಕಳಲ್ಲಿ ಶಿಸ್ತು, ಸಂಯಮ, ಸೃಜನಶೀಲತೆಯು ಒಡಮೂಡಿ ದೇಶದ ಆಡಳಿತದ ವೈಖರಿ ತಿಳಿಯಲು ಚುನಾವಣಾ ಮೂಲಕ ಶಾಲಾ ಸಂಸತ್ತು ರಚನೆ ಮಾಡಲಾಯಿತು ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಲಾ ಮುಖ್ಯೋಪಾಧ್ಯಾಯ ಎಸ್.ಜಿ.ಕೂಲ್ಮಿ ಮಾತನಾಡಿ, ಮಕ್ಕಳು ವಿವಿಧ ಸಂಘಗಳ ಪದಾಧಿಕಾರಿಗಳಾಗಿ ವರ್ಷಪೂರ್ತಿ ಚಟುವಟಿಕೆಯಲ್ಲಿ ತೊಡಗಿ ಕಾರ್ಯನಿರ್ವಹಿಸಿದಾಗ ನಿಜಕ್ಕೂ ಅವರಲ್ಲಿ ಹೊಸ ಚೈತನ್ಯ ಮೂಡುತ್ತದೆ ಎಂದರು. ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಕೆ.ಐ.ಪಾಟೀಲ ಸ್ವಾಗತಿಸಿ ಪರಿಚಯಿಸಿದರು. ಯು.ಎಸ್.ಗುಂಜಾಳ ನಿರೂಪಿಸಿದರು. ಕೊನೆಯಲ್ಲಿ ಶಾಲಾ ಪ್ರಧಾನಿ ಮೇಘಾ ಕೊಪ್ಪದ ವಂದಿಸಿದರು.

ಶಾರದಾ ಕುರಿಯವರ, ತೇಜಸ್ವಿನಿ ಚಿಮ್ಮಲ್, ಪ್ರತಿಭಾ ಮುಳಗುಂದ, ಭಾಗ್ಯಲಕ್ಷ್ಮೀ ಮಾದರ, ಸುರೇಖಾ ಮಿರಜನ್ನವರ, ನೇತ್ರಾವತಿ ಪಾಟೀಲ, ವಿಜಯಲಕ್ಷ್ಮೀ ಸರಕ್ಕನ್ನವರ, ಪ್ರಗತಿ ಪಾಟೀಲ, ಚೈತ್ರಾ ಅಂಗಡಿ, ಗೀತಾ ಕುಂಬಾರ, ಮೇಘಾ ಅಗಸಿಮನಿ ಮುಂತಾದವರು ವಿವಿಧ ಖಾತೆಗಳ ಮಂತ್ರಿಗಳಾಗಿ ಆಯ್ಕೆಯಾದರು.

# ನಂದಿವೇರಿಮಠದಲ್ಲಿ ಶಿವಾನುಭವ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ



ಶ್ರೀ ಮ.ನೃ.ಪ. ಶಿವಕುಮಾರ ಸ್ವಾಮಿಗಳು ಸಿದ್ರಾಮೇಶ್ವರ ನಗರ ವಡ್ಡರಗೇರಿ ಇವರ ಸಾನ್ನಿಧ್ಯದಲ್ಲಿ ಇತ್ತೀಚೆಗೆ ಪರಿಸರ ಶಿವಾನುಭವ ಜರುಗಿತು.

ಶ್ರೀ ಶಿವಕುಮಾರ ಸ್ವಾಮೀಜಿಯವರು ಮಾತನಾಡಿ, ಭಕ್ತರೇ ಶ್ರೀ ನಂದಿವೇರಿ ಮಠಕ್ಕೆ ಆಧಾರವಾಗಿದ್ದಾರೆ. ಭಕ್ತಿ, ಶ್ರದ್ಧೆಯಿಂದ ಈ ಮಠಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಮತಿ ಬದಿಯವರು ಸಾಹಿತ್ಯದಲ್ಲಿ ಒಳ್ಳೆಯ ಕಾರ್ಯ ಮಾಡಿದ್ದಾರೆ. ಶ್ರೀ ರತ್ನನ ಪದ ಸಮಾಜದ ಮುಖವಾಗಿ ಹೊರಹೊಮ್ಮಲಿ. ಅವರಿಗೆ ಇನ್ನಷ್ಟು ಬರೆಯುವ ಶಕ್ತಿಯನ್ನು ದೇವರು ಕರುಣಿಸಲಿ ಎಂದು ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಜಯಪ್ರಕಾಶ ಬಡಿಗೇರ ಮಾತನಾಡಿ, ಜಲ, ನಿಸರ್ಗದಲ್ಲಿರುವ ಎಲ್ಲ ಸಂಪನ್ಮೂಲಗಳು ಅಭಿವೃದ್ಧಿ ಹೊಂದಿದರೆ ಪರಿಸರ ಉತ್ತಮವಾಗಿರುತ್ತದೆ. ಪ್ರಾಥಮಿಕ ಶಿಕ್ಷಣದಿಂದ ಪ್ರಾರಂಭಿಸಿ, ಉಚ್ಚ ಶಿಕ್ಷಣದ ಮಕ್ಕಳಿಗೆ ನಾವು ಒಂದೊಂದೇ ಗಿಡವನ್ನು ಬೆಳೆಸಲು ಹೇಳಿದರೂ ಪರಿಸರ ಪ್ರಬುದ್ಧವಾಗಿ ಬೆಳೆಯುವುದು ಎಂದರು.

ಅತಿಥಿಗಳಾಗಿ ಆಗಮಿಸಿದ್ದ ಜಯಪ್ರಕಾಶ ಬಡಿಗೇರರನ್ನು ಸನ್ಮಾನಿಸಲಾಯಿತು. ಬಿ ಡಿ ಕಿಲಬನವರ ಪ್ರಸಾದ ಸೇವೆಯನ್ನು ವಹಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಸಂತೋಷ ಮಲಕಶೆಟ್ಟಿ, ಕೌಳಶೆಟ್ಟಿಯವರು, ಹೇಮಾ, ಮಾದರ, ಸಿದ್ರಾಮೇಶ್ವರ ನಗರದ ಸರ್ವ ಭಕ್ತರು ಉಪಸ್ಥಿತರಿದ್ದರು. ವ್ಹಿ ಎಂ ಕುಂದ್ರಾಳಹಿರೇಮಠ ಪ್ರಾರ್ಥನಾ ಗೀತೆ ಹಾಡಿದರು. ಬಿ ಬಿ ಪಾಟೀಲ ಸ್ವಾಗತಿಸಿದರು. ಹುಡೇದ ಗುರುಗಳು ವಂದನಾರ್ಪಣೆಗೈದರು. ಮಲ್ಲಣ್ಣ ಗಬ್ಬಸಾವಳಗಿಯವರ ಮಂಗಲಗೀತೆಯೊಂದಿಗೆ ಸಭೆ ಸಮಾರೋಪಗೊಂಡಿತು.

# ಗ್ರಾಮಗಳ ನಿರ್ವಹಣೆ ನೂತನ ಅಧ್ಯಕ್ಷರ ಜವಾಬ್ದಾರಿ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ



ಗ್ರಾಮಗಳ ನಿರ್ವಹಣೆ, ಅಭಿವೃದ್ಧಿ ಮತ್ತು ಹಸಿರೀಕರಣದ ಜವಾಬ್ದಾರಿ ಪ್ರತಿಯೊಂದು ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಮೇಲಿದ್ದು ಅದನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸಬೇಕು ಎಂದು ಜಿಲ್ಲಾ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜ್ಯೋತಿ ಎಂ. ಗೊಂಡಬಾಳ ಸಲಹೆ ನೀಡಿದರು.

ಅವರು ಜಿಲ್ಲೆಯಲ್ಲಿ ಕಾಂಗ್ರೆಸ್ ಬೆಂಬಲಿತ ನೂತನ ಗ್ರಾ ಪಂ ಅಧ್ಯಕ್ಷ–ಉಪಾಧ್ಯಕ್ಷರನ್ನು ಸನ್ಮಾನಿಸಿ ಮಾತನಾಡಿದರು.

ಗ್ರಾಮ ಪಂಚಾಯತಿಗಳು ತಮ್ಮ ಗ್ರಂಥಾಲಯವನ್ನು ಸರಿಯಾಗಿ ನಿರ್ವಹಿಸಬೇಕು. ವಿಶೇಷ ಚೇತನರಿಗೆ, ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿರುವ ವಿಶೇಷ ನಿಧಿಯನ್ನು ವಿವೇಚನೆಯಿಂದ ಬಳಸುವದು ಹಾಗೂ ಕ್ರೀಡೆಗೆ ಇಟ್ಟಿರುವ ಹಣದಲ್ಲಿ ಉತ್ತಮವಾಗಿ ಕ್ರೀಡಾ ಚಟುವಟಿಕೆಗಳನ್ನು ನಡೆಸುವ ಕೆಲಸ ಆಗಬೇಕಿದೆ ಎಂದು ಹೇಳಿದರು.

ಅಬ್ದುಲ್ ಮಜೀರ್ ಸಾಬ್ ತರಬೇತಿ ಸಂಸ್ಥೆಯ ಮೂಲಕ ಪಂಚಾಯತ್‌ರಾಜ್ ಕುರಿತ ತರಬೇತಿ ನೀಡಿದ ಅನುಭವವನ್ನು ಎಲ್ಲಾ ಗ್ರಾ ಪಂ ಅಧ್ಯಕ್ಷ–ಉಪಾಧ್ಯಕ್ಷರ ಜೊತೆಗೆ ಹಂಚಿಕೊಳ್ಳಲು ಶೀಘ್ರ ಕಾರ್ಯಕ್ರಮ ರೂಪಿಸಲಾಗುವದು.

ಅಲ್ಲಿ ಎಲ್ಲರನ್ನೂ ಸನ್ಮಾನಿಸುವದರೊಂದಿಗೆ ಉಪಯುಕ್ತ ಮಾಹಿತಿ ನೀಡಲಾಗುವದು ಎಂದರು. ಈ ವೇಳೆ ಮಹಿಳಾ ಘಟಕದ ಮುಖಂಡರಾದ ಸೌಭಾಗ್ಯಲಕ್ಷ್ಮಿ ಗೊರವರ್, ಕಾವೇರಿ ರ್‍ಯಾಗಿ, ಶಿವಪ್ಪ, ಮಹೇಶ ನಾಯಕ್, ಧರ್ಮಣ್ಣ, ಸಿದ್ದಿ ಬಾಷಾ ಮುಂತಾದವರಿದ್ದರು.

## ಚುನಾವಣೆ ವೇಳೆ ಮತಗಟ್ಟೆ ಅಧಿಕಾರಿಗಳನ್ನಾಗಿ ನೇಮಕ ಸರಿಯಲ್ಲ–ಬಿಎಲ್‌ಓ ತರಬೇತಿ ಬಹಿಷ್ಕಾರ

# ಶಿಕ್ಷಕರ, ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪ್ರಾಥಮಿಕ ಶಾಲೆ ಶಿಕ್ಷಕರನ್ನು ಚುನಾವಣೆ ವೇಳೆ ಮತಗಟ್ಟೆ ಅಧಿಕಾರಿಗಳನ್ನಾಗಿ ನೇಮಕ ಮಾಡುತ್ತಿರುವುದು ಸರಿಯಾದ ಕ್ರಮವಲ್ಲ. ಅವರನ್ನು ಹೆಚ್ಚುವರಿ ಬಿಎಲ್‌ಓ ಕೆಲಸದಿಂದ ಮುಕ್ತಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕ ಸಂಘದಿಂದ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರೆ ಇದೇ ಸಂದರ್ಭದಲ್ಲಿ ನಾವೂ ಸಹ ಬಿಎಲ್‌ಓ ಕಾರ್ಯಕ್ಕೂ ಹೋಗುವುದಿಲ್ಲ ಎಂದು ಬಿಎಲ್‌ಓಗಳ ತರಬೇತಿ ಬಹಿಷ್ಕರಿಸಿದ ಅಂಗನವಾಡಿ ಕಾರ್ಯಕರ್ತೆಯರು ತಾ.ಪಂ ಎದುರು ಪ್ರತಿಭಟನೆ ನಡೆಸಿದ ಘಟನೆ ಗುರುವಾರ ನಡೆಯಿತು.

ಈ ವೇಳೆ ಮಾತನಾಡಿದ ತಾಲೂಕಾ ಪ್ರಾ.ಶಾ.ಶಿ ಸಂಘದ ಅಧ್ಯಕ್ಷ ಬಿ.ಎಸ್.ಹರ್ಲಾಪೂರ, ಮತದಾರರ ಪಟ್ಟಿ ಪರಿಷ್ಕರಣೆ ಸೇರಿ ಚುನಾವಣೆ ಕಾರ್ಯಗಳಿಗೆ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸದಿರುವಂತೆ ಸುಪ್ರೀಂಕೋರ್ಟ್ ಆದೇಶ ನೀಡಿದೆ. ಬರುವ ಎಲ್ಲ ಚುನಾವಣೆ ಕಾರ್ಯಕ್ಕೆ ಶಿಕ್ಷಕರನ್ನು ಬಳಸುವುದರಿಂದ ವಿದ್ಯಾರ್ಥಿಗಳ ಕಲಿಕೆ, ಶಿಕ್ಷಣದ ಗುಣಮಟ್ಟಕ್ಕೆ ಪೆಟ್ಟು ಬೀಳುತ್ತದೆ. ಶಿಕ್ಷಕರೆಲ್ಲರನ್ನೂ ಬಿಎಲ್‌ಓ ಕೆಲಸದಿಂದ ಮುಕ್ತಿಗೊಳಿಸಬೇಕು. ಕೂಡಲೇ ಸರಕಾರ ಪ್ರಾಥಮಿಕ ಶಾಲೆ ಶಿಕ್ಷಕರನ್ನು ಬಿಎಲ್‌ಓಗಳಾಗಿ ನಿಯುಕ್ತಿ ಮಾಡುವುದನ್ನು ಕೈ ಬಿಡಬೇಕು ಎಂದು ಒತ್ತಾಯಿಸಿ ಮನವಿ ಸಲ್ಲಿಸಿದರು.

ಈ ವೇಳೆ ಗ್ರೇಡ್–2 ತಹಸೀಲ್ದಾರ ನಟರಾಜನ್ ಮನವಿ ಸ್ವೀಕರಿಸಿದರು. ಸರಕಾರಿ ನೌಕರರ ಸಂಘದ ತಾಲೂಕ ಅಧ್ಯಕ್ಷ ಡಿ.ಎಚ್.ಪಾಟೀಲ, ಸಂಘದ ತಾಲೂಕ ಪದಾಧಿಕಾರಿ ಧರ್ಮಪ್ಪ ಲಮಾಣಿ, ಚಂದ್ರಕಾಂತ ನೇಕಾರ, ಬಿ.ಜಿ.ಯತ್ತಿನಹಳ್ಳಿ, ಡಿ.ಡಿ.ಲಮಾಣಿ, ಗೀತಾ ಹಳ್ಯಾಳ, ಎಂ.ಎ.ನಧಾಫ, ಎಸ್.ಬಿ.ಅಣ್ಣಿಗೇರಿ, ಎ.ಎಂ.ಗುತ್ತಲ, ಆನಂದ ಕ್ಷತ್ರಿಯ, ಎಸ್.ಆರ್.ನಧಾಫ್, ಉಪ್ಪಿನ ಸೇರಿ ಅನೇಕ ಶಿಕ್ಷಕರಿದ್ದರು.

ಅಂಗನವಾಡಿ ಕಾರ್ಯಕರ್ತೆಯರಿಂದಲೂ ವಿರೋಧ ಸರಕಾರದ ಅನೇಕ ಯೋಜನೆಗಳಿಂದ ಅಂಗನವಾಡಿ ಸಿಬ್ಬಂದಿಗಳಿಗೆ ಕೆಲಸದ ಒತ್ತಡ ಹೆಚ್ಚಾಗಿದೆ. ಇದೀಗ ಗೃಹಲಕ್ಷ್ಮಿ, ಆರೋಗ್ಯ ಸಮೀಕ್ಷೆ ಸೇರಿ ಇನ್ನೂ ಅನೇಕ ಕೆಲಸ ಕಾರ್ಯಗಳಿಗೂ ನಮ್ಮನ್ನು ಬಳಸಿಕೊಳ್ಳುತ್ತಿದ್ದಾರೆ. ಇದರಿಂದ ಅಂಗನವಾಡಿ ಕೇಂದ್ರದಲ್ಲಿನ ಮಕ್ಕಳಿಗೆ ವಿದ್ಯಾಭ್ಯಾಸ, ಉಪಚಾರ ಮಾಡಲು ಸಾಧ್ಯವಾಗುತ್ತಿಲ್ಲ. ನಮ್ಮನ್ನೂ ಬಿಎಲ್‌ಓ ಕೆಲಸದಿಂದ ಕೈ ಬಿಡಬೇಕು ಎಂದು ಆಗ್ರಹಿಸಿದರು. ಆದರೆ ಇವರ ಆಗ್ರಹ. ಮನವಿಗೆ ಯಾರೂ ಕಿವಿಗೊಡದ್ದರಿಂದ ಬೇಸತ್ತ ಕಾರ್ಯಕರ್ತೆಯರು ಅಲ್ಲಿಂದ ಎದ್ದು ಹೋದ ಘಟನೆ ನಡೆದಿದೆ.

# ಕಾರವಾರ ತಲುಪಿದ ರಾಜ್ಯದ ಮೊದಲ ತೇಲುವ ಜೆಟ್ಟಿ

■ವಿಜಯಸಾಕ್ಷಿ ಸುದ್ದಿ, ಕಾರವಾರ



ಕರಾವಳಿಯಲ್ಲಿ ರಾಜ್ಯಕ್ಕೆ ಮೊದಲ ಬಾರಿಗೆ ತೇಲುವ ಕಾಂಕ್ರೀಟ್ ಜೆಟ್ಟಿ ಲಭ್ಯವಾಗಿದೆ. ಇಲ್ಲಿನ ಸದಾಶಿವಗಡ ಬೆಟ್ಟದ ಬಳಿಯ ಕರಾವಳಿಯಲ್ಲಿ ತೇಲುವ ಕಾಂಕ್ರೀಟ್ ಜೆಟ್ಟಿಯನ್ನು ನಿರ್ಮಿಸಲಾಗಿದೆ. ಈ ಜೆಟ್ಟಿಯಲ್ಲಿ ಜಲ ಕ್ರೀಡೆಯಲ್ಲಿ ಬಳಸುವ ದೋಣಿಗಳು, ಪ್ರವಾಸಿ ದೋಣಿಗಳು ಲಂಗರು ಹಾಕಲಿವೆ. ಇದು ಕರ್ನಾಟಕದ ಮೊದಲ ತೇಲುವ ಕಾಂಕ್ರೀಟ್ ಜೆಟ್ಟಿ ಆಗಿದೆ. ಸದ್ಯ, ಕಾಳಿ ನದಿಯು ಅರಬ್ಬಿ ಸಮುದ್ರವನ್ನು ಸೇರುವ ಸ್ಥಳದಲ್ಲಿ ಇದು ತಲುಪಿದೆ.

12 ಮೀಟರ್ ಉದ್ದ, 3 ಮೀಟರ್ ಅಗಲವಿರುವ ಈ ಜೆಟ್ಟಿಯನ್ನು ಮುಂಬೈ ಮೂಲದ ಮರೀನ್‌ಟೆಕ್ ಇಂಡಿಯಾ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ನಿರ್ಮಿಸಿದೆ. 2.7 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಂಡ ಯೋಜನೆಗೆ ಈ ಹಿಂದೆ ಭಾರತೀಯ ಒಳನಾಡಿನ ಜಲಮಾರ್ಗ ಪ್ರಾಧಿಕಾರ ಆಡಳಿತಾತ್ಮಕ ಅನುಮೋದನೆ ನೀಡಿತ್ತು. ಅದರಂತೆ, ಜೆಟ್ಟಿ ಸಿದ್ಧಗೊಂಡು ಗಮ್ಯಸ್ಥಾನ ತಲುಪಿದೆ.

ಈ ಜೆಟ್ಟಿಯೊಂದಿಗೆ ಸಂಪರ್ಕ ಹೊಂದಿರುವ 20 ಮೀಟರ್ ಉದ್ದದ ಮಿನಿ ಸ್ಟೀಲ್ ಬ್ರಿಡ್ಜ್ (ಗ್ಯಾಂಗ್ ವೇ) ತೇಲುವ ಜೆಟ್ಟಿಯನ್ನು ದಡ–ಕ್ಕೆ ಸಂಪರ್ಕಿಸುತ್ತದೆ. ಜೆಟ್ಟಿ ಎಲ್ಲ ವಿಧದ ಆಧುನಿಕ ವ್ಯವಸ್ಥೆಗಳನ್ನೂ ಒಳಗೊಂಡಿದ್ದು, ನ್ಯಾವಿಗೇಷನ್ ಸಾಧನಗಳು, ಬ್ಯಾಟರಿಗಳ ಚಾರ್ಜಿಂಗ್ ವ್ಯವಸ್ಥೆಯನ್ನೂ ಹೊಂದಿದೆ. ಈ ಜೆಟ್ಟಿಯನ್ನು ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ ಎಂದು ಬಂದರು ಇಲಾಖೆಯ ಇಂಜಿನಿಯರ್ ಪಾಂಡುರಂಗ ಕುಲಕರ್ಣಿ ತಿಳಿಸಿದ್ದಾರೆ.

## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಅರ್ಹ ಫಲಾನುಭವಿಗಳು ಲಾಭ ಪಡೆಯಿರಿ

▸▸ ಮೊದಲನೇ ಪುಟದಿಂದ

ಗುರುತಿಸಲಾಗಿರುವ ಪ್ರತಿಯೊಬ್ಬ ಯಜಮಾನಿ ಮಹಿಳೆಯ ಮೊಬೈಲ್ ಸಂಖ್ಯೆಗೆ ನೋಂದಣಿ ದಿನಾಂಕ, ಸಮಯ ಹಾಗೂ ನೊಂದಣಿ ಕೇಂದ್ರದ ವಿವರಗಳನ್ನು ಎಸ್.ಎಂ.ಎಸ್. ಮೂಲಕ ತಿಳಿಸಲಾಗುತ್ತದೆ. ಇದಲ್ಲದೆ ಟೋಲ್ ಫ್ರೀ ಸಂಖ್ಯೆ 1902ಗೆ ಕಾಲ್ ಮಾಡಿ ಅಥವಾ 8147500500 ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್. ಮೂಲಕ ಸಂದೇಶ ಕಳುಹಿಸಿ ನೋಂದಣಿ ಕುರಿತು ಮಾಹಿತಿ ಪಡೆಯಬಹುದಾಗಿದೆ.

ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ಫಲಾನುಭವಿಗಳು ಗ್ರಾಮದ ಸಮೀಪವಿರುವ ಗ್ರಾಮ ಒನ್ ಕೇಂದ್ರ ಅಥವಾ ಬಾಪೂಜಿ ಸೇವಾ ಕೇಂದ್ರಗಳಿಗೆ ಮತ್ತು ನಗರ ಪ್ರದೇಶದಲ್ಲಿ ವಾಸಿಸುವ ಫಲಾನುಭವಿಗಳು ಸಮೀಪದ ಕರ್ನಾಟಕ ಒನ್, ವಾರ್ಡ ಕಛೇರಿ, ಸ್ಥಳಿಯ ನಗರಾಡಳಿತ ಸಂಸ್ಥೆಯ ಕಛೇರಿ, ಗೃಹಲಕ್ಷ್ಮೀ ನೋಂದಣಿ ಕೇಂದ್ರಕ್ಕೆ ಹೋಗಿ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಇನ್ನು ಎರಡನೇ ವಿಧಾನವಾಗಿ ಪ್ರಜಾಪ್ರತಿನಿಧಿ (ಸರ್ಕಾರದಿಂದ ಗುರುತಿಸಲ್ಪಟ್ಟ ಸ್ವಯಂ ಸೇವಕರು) ಫಲಾನುಭವಿಗಳ ಮನೆಗೆ ಭೇಟಿ ನೀಡಲಿದ್ದು, ಅವರಿಂದಲೂ ಸಹ ಸ್ಥಳದಲ್ಲಿಯೇ ನೊಂದಾಯಿಸಿಕೊಳ್ಳಬಹುದಾಗಿದೆ. ಒಂದು ವೇಳೆ ನಿಗದಿಪಡಿಸಿದ ದಿನಾಂಕ ಮತ್ತು ಸಮಯದಂದು ಗ್ರಾಮ ಒನ್, ಬಾಪೂಜಿ ಕೇಂದ್ರ, ಕರ್ನಾಟಕ ಒನ್ ಕೇಂದ್ರಗಳಿಗೆ ಹೋಗಲು ಸಾಧ್ಯವಾಗದೆ ಇದ್ದಲ್ಲಿ ಅದೇ ಸೇವಾ ಕೇಂದ್ರಗಳಿಗೆ ಮುಂದಿನ ಯಾವುದೇ ದಿನಾಂಕದಂದು ಸಂಜೆ 5 ರಿಂದ 7 ಗಂಟೆಯೊಳಗೆ ಭೇಟಿ ನೀಡಿ ನೋಂದಾಯಿಸಿಕೊಳ್ಳಬಹುದಾಗಿದೆ.

**ಯಾವುದೆಲ್ಲಾ ದಾಖಲೆ ಬೇಕು**

ಯೋಜನೆಯಡಿ ನೋಂದಾಯಿಸಿಕೊಳ್ಳಲು ಪಡಿತರ ಚೀಟಿ ಸಂಖ್ಯೆ, ಫಲಾನುಭವಿ ಮತ್ತು ಪತಿಯ ಆಧಾರ ಕಾರ್ಡ ಸಂಖ್ಯೆ, ಬ್ಯಾಂಕ್ ಖಾತೆ ಪಾಸ್ ಬುಕ್ (ಆಧಾರ ನಂಬರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆ ಹೊರತುಪಡಿಸಿ ಪರ್ಯಾಯ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಬಯಸಿದ್ದಲ್ಲಿ, ಸದರಿ ಬ್ಯಾಂಕ್ ಖಾತೆಯ ಪಾಸ್ ಬುಕ್) ಮಾಹಿತಿ ಅಗತ್ಯವಿದ್ದು, ನೋಂದಣಿ ಕೇಂದ್ರಕ್ಕೆ ಈ ಎಲ್ಲಾ ಮಾಹಿತಿಗಳೊಂದಿಗೆ ಹಾಜರಾಗುವುದು.

### ಪತ್ರಿಕಾಗೋಷ್ಠಿಯಲ್ಲಿ ಡಾ.ಗಂಗೂಬಾಯಿ ಹಾನಗಲ್ ವಿವಿ ಕುಲಪತಿ ಪ್ರೊ. ನಾಗೇಶ್ ಬೆಟ್ಟಕೋಟೆ ಮಾಹಿತಿ

# ಕೋರ್ಸ್‌ಗಳ ಪರಿನಿಯಮಗಳಿಗೆ ರಾಜ್ಯಪಾಲರ ಅಂಕಿತ

**■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕೇಂದ್ರ ಸ್ಥಾನದಲ್ಲಿ ಮಾತ್ರ ನಡೆಸುತ್ತಿದ್ದ ಕೋರ್ಸುಗಳನ್ನು ರಾಜ್ಯವ್ಯಾಪಿ ನಡೆಸಲು ಸಂಸ್ಥೆಗಳಿಗೆ ಅವಕಾಶವಿದೆ. ವಿಶ್ವವಿದ್ಯಾಲಯದೊಡನೆ ರಾಜ್ಯದ ಯಾವುದೇ ನೋಂದಾಯಿತ ಶಿಕ್ಷಣ ಸಂಸ್ಥೆಗಳು ಒಡಂಬಡಿಕೆ ಮಾಡಿಕೊಂಡು ಸಂಗೀತ, ನೃತ್ಯ ಮತ್ತು ಮತ್ತು ಪ್ರದರ್ಶಕ ಕಲೆಗಳ ಕೋರ್ಸುಗಳನ್ನು ನಡೆಸಲು ಅನುವಾಗುವ ಪರಿನಿಯಮಗಳಿಗೆ ರಾಜ್ಯಪಾಲರ ಅಂಕಿತ ದೊರಕಿದೆ. ಈಗಾಗಲೇ ರಾಜ್ಯದ ಏಳು ಶಿಕ್ಷಣ ಸಂಸ್ಥೆಗಳು ವಿಶ್ವವಿದ್ಯಾಲಯದೊಡನೆ ಒಡಂಬಡಿಕೆ ಮಾಡಿಕೊಂಡು ಕೋರ್ಸುಗಳನ್ನು ನಡೆಸುತ್ತಿವೆ ಎಂದು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ನಾಗೇಶ್ ವಿ ಬೆಟ್ಟಕೋಟೆ ಹೇಳಿದರು.



ಗುರುವಾರ ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಮೂಜಗಂ ಸಭಾಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ವಯೋಲಿನ್ ವಾದಕರು, ಪದ್ಮ ಭೂಷಣ ಪ್ರಶಸ್ತಿ ಪುರಸ್ಕೃತ ಡಾ. ಎಲ್ ಸುಬ್ರಹ್ಮಣ್ಯಂ ಅವರು ತಮ್ಮ ಗ್ಲೋಬಲ್ ಸೆಂಟರ್ ಫಾರ್ ಎಕ್ಸಲೆನ್ಸ್ ಸಂಸ್ಥೆಯಲ್ಲಿ ಸಂಗೀತ ಕೋರ್ಸ್, ನೃತ್ಯ ಕಲಾವಿದೆ ಡಾ. ಅನುರಾಧ ವಿಕ್ರಾಂತ್ ಅವರು ತಮ್ಮ ದೃಷ್ಟಿ ಆರ್ಟ್ ಸೆಂಟರ್‌ನಲ್ಲಿ ನೃತ್ಯಕ್ಕೆ ಸಂಬಂಧಿಸಿದ ಕೋರ್ಸ್ ಹಾಗೂ ಬೆಂಗಳೂರಿನ ಎಂಇಎಸ್ ಶಿಕ್ಷಣ ಸಂಸ್ಥೆ ಮತ್ತು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳು ನಾಟಕದ ಕೋರ್ಸುಗಳನ್ನು ನಡೆಸಲು ಒಡಂಬಡಿಕೆ ಮಾಡಿಕೊಂಡಿವೆ. ರಾಜ್ಯ ಸರ್ಕಾರದ ಅನುದಾನಿತ ಶಿಕ್ಷಣ ಸಂಸ್ಥೆಯಾದ ಕರ್ನಾಟಕ ಜಾನಪದ ಪರಿಷತ್ತು ಕೂಡ ಜಾನಪದ ಕಲೆಗಳಲ್ಲಿ ಕೋರ್ಸುಗಳನ್ನು ನಡೆಸಲು ಒಡಂಬಡಿಕೆ ಮಾಡಿಕೊಳ್ಳುತ್ತಿದೆ. 2023-24ನೇ ಶೈಕ್ಷಣಿಕ ಸಾಲಿನಿಂದಲೇ ಈ ಸಂಸ್ಥೆಗಳಿಗೆ ಕೋರ್ಸ್ ನಡೆಸಲು ಅನುಮತಿ ನೀಡಲಾಗುತ್ತಿದೆ ಎಂದರು.

> ಕರ್ನಾಟಕ ಸರ್ಕಾರವು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸುತ್ತಿದ್ದ ಸಂಗೀತ ಪರೀಕ್ಷೆ ಹಾಗೂ ಪ್ರದರ್ಶಕ ಕಲೆಗಳ ನೃತ್ಯ ಮತ್ತು ತಾಳ ವಾದ್ಯಗಳಲ್ಲಿ ಜೂನಿಯರ್, ಸೀನಿಯರ್ ಮತ್ತು ವಿದ್ವತ್ ಪರೀಕ್ಷೆಗಳನ್ನು ನಡೆಸುವ ಮತ್ತು ಪ್ರಮಾಣಪತ್ರಗಳನ್ನು ನೀಡುವ ಸಂಪೂರ್ಣ ಜವಾಬ್ದಾರಿಯನ್ನು ವಿಶ್ವವಿದ್ಯಾಲಯಕ್ಕೆ ನೀಡಿದೆ. ಪಠ್ಯ ಕ್ರಮಗಳಲ್ಲಿ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳುವುದರ ಜೊತೆಗೆ ಆಧುನಿಕ ತಾಂತ್ರಿಕತೆಯನ್ನು ಸದ್ಬಳಕೆ ಮಾಡಿಕೊಂಡು ಪಾರದರ್ಶಕತೆಯಿಂದ ಪರೀಕ್ಷೆಗಳನ್ನು ವಿಶ್ವವಿದ್ಯಾಲಯದಲ್ಲಿ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ವಿದ್ವಾಂಸರೊಡನೆ ಸಂವಾದ ನಡೆಸಿ ಪರೀಕ್ಷೆಗಳನ್ನು ನಡೆಸುವ ದಿನಾಂಕವನ್ನು ನಿಗದಿಪಡಿಸಲಾಗುವುದು.
>
> **- ಪ್ರೊ. ನಾಗೇಶ್ ವಿ ಬೆಟ್ಟಕೋಟೆ.**
> ಡಾ.ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯದ ಕುಲಪತಿ.

ಜುಲೈ 30ರೊಳಗೆ ಸಂಸ್ಥೆಗಳು ಒಡಂಬಡಿಕೆ ಮಾಡಿಕೊಳ್ಳಬಹುದು. ನವೆಂಬರ್ ನಂತರದಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ವಿಶ್ವವಿದ್ಯಾಲಯದ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ವಿಶ್ವವಿದ್ಯಾಲಯ ಹಾಗೂ ಯುಜಿಸಿಯ ಪಠ್ಯಕ್ರಮದಂತೆ ಸಂಸ್ಥೆಗಳು ಬೋಧನೆ ಮಾಡಬೇಕು.

ಸಂಗೀತ, ನೃತ್ಯ ವಿಷಯಗಳಲ್ಲಿ ಡಿಪ್ಲೋಮಾ ಪ್ರಮಾಣಪತ್ರ ಪಡೆದವರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಸಾಮಾನ್ಯ ಪದವಿಯ ಪ್ರವೇಶ ಶುಲ್ಕವನ್ನು ಈ ಕೋರ್ಸ್‌ಗಳಿಗೆ ನಿಗದಿ ಪಡಿಸಲಾಗುವುದು. ಸಂಸ್ಥೆಗಳು ಪ್ರವೇಶ ಶುಲ್ಕದ ಶೇ.25ರಷ್ಟು ಹಣವನ್ನು ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಬೇಕು. 6 ತಿಂಗಳ ಸರ್ಟಿಫಿಕೇಟ್ ಕೋರ್ಸ್ ಹಾಗೂ 1 ವರ್ಷ ಅವಧಿಯ ಕೋರ್ಸುಗಳನ್ನು ನಡೆಸಲು ಅವಕಾಶ ಕಲ್ಪಿಸಲಾಗುತ್ತದೆ ಎಂದರು.

ಪ್ರಾಚಾರ್ಯೆ ಡಾ. ಸಿಸಿಲೀಯಾ ಡಿಕ್ರೋಜ್, ಸಂಗೀತ ವಿದ್ವಾಂಸರಾದ ಶಿವಲೀಲಾ ಸಿದ್ಧವೀರಿ, ವಿಜಯಲಕ್ಷ್ಮೀ, ಶಿರಸಿ, ಕುಮಟಾ, ಬೆಳಗಾವಿ, ಧಾರವಾಡ, ಹುಬ್ಬಳ್ಳಿ ಭಾಗಗಳ ಸಂಗೀತ ವಿದ್ವಾಂಸರು ಉಪಸ್ಥಿತರಿದ್ದರು.

# ಗ್ಯಾರಂಟಿ ಯೋಜನೆ; ಆಧಾರ್ ಜೋಡಣೆಗೆ ಮುಗಿಬೀಳುತ್ತಿರುವ ಜನ!



**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಗ್ಯಾರಂಟಿ ಯೋಜನೆಯ ಅನ್ನಭಾಗ್ಯ, ಗೃಹಲಕ್ಷ್ಮಿ ಹಣವನ್ನು ರಾಜ್ಯ ಸರ್ಕಾರ ಅಕೌಂಟ್‌ಗೆ ಜಮಾ ಮಾಡುತ್ತಿರುವ ಹಿನ್ನೆಲೆ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಮಾಡಲು ಬ್ಯಾಂಕಿಗೆ ಮುಗಿಬಿದ್ದಿರುವ ದೃಶ್ಯ ಪಟ್ಟಣ ಸೇರಿ ಗ್ರಾಮೀಣ ಪ್ರದೇಶಗಳ ಬ್ಯಾಂಕುಗಳಲ್ಲಿಯೂ ಕಂಡು ಬಂದಿತು.

ರಾಜ್ಯ ಸರ್ಕಾರ ಪ್ರತಿ ಕೆಜಿ ಅಕ್ಕಿಗೆ 170 ಗಳಂತೆ 5 ಕೆಜಿ ಅಕ್ಕಿಯ ಹಣವನ್ನು ಬಿಪಿಎಲ್ ಕಾರ್ಡ್ ಫಲಾನುಭವಿಗಳ ಅಕೌಂಟ್‌ಗೆ ಜಮಾ ಮಾಡುತ್ತಿದೆ. ಜುಲೈ ತಿಂಗಳ ಹಣ ಪಡೆಯಲು ಜು.20 ರೊಳಗೆ ಬ್ಯಾಂಕ್ ಖಾತೆಗೆ ಆಧಾರ ಜೋಡಣೆ ಮಾಡಿಸಬೇಕೆಂದು ಹೇಳಿದ್ದರಿಂದ ಗುರುವಾರ ಮಹಿಳೆಯರ ದಂಡು ಬ್ಯಾಂಕಿಗೆ ದೌಡಾಯಿಸಿತ್ತು. ಇದರಿಂದ ಸಾಕಷ್ಟು ಗದ್ದಲ ಉಂಟಾಗಿತ್ತು. ಅಲ್ಲದೇ ಈಗಾಗಲೇ ಹಣ ಜಮಾ ಆಗಿರುವ ಬಗ್ಗೆ ಸರಕಾರವು ಆಯಾ ಫಲಾನುಭವಿಗಳ ಮೊಬೈಲ್ ಸಂಖ್ಯೆಗೆ ಮೆಸೇಜ್ ರವಾನಿಸಿದೆ. ಇದನ್ನು ಗಮನಿಸಿದ ಫಲಾನುಭವಿಗಳು ಹಣ ಪಡೆಯಲು ಬ್ಯಾಂಕ್‌ಗೆ ಎಡತಾಕುತ್ತಿದ್ದಾರೆ.

ಬ್ಯಾಂಕಿನ ಸಿಬ್ಬಂದಿಗಳು ಬ್ಯಾಂಕಿನ ಕೆಲಸಗಳ ಒತ್ತಡದ ನಡುವೆ ಗ್ಯಾರಂಟಿ ಯೋಜನೆಯ ಫಲಾನುಭವಿಗಳಿಗೆ ಹೊಸ ಖಾತೆ ತೆರೆಯುವುದು, ಆಧಾರ್ ಮತ್ತು ಮೊಬೈಲ್ ನಂಬರ್ ಲಿಂಕ್ ಮಾಡುವ ಕಾರ್ಯದಲ್ಲಿ ಬ್ಯುಸಿಯಾಗಿದ್ದಾರೆ.



ಆದರೆ ನೆಟ್‌ವರ್ಕ ಸಮಸ್ಯೆಯಿಂದ ಬ್ಯಾಂಕಿನಲ್ಲಿ ಜನಸಂದಣಿ ತಪ್ಪದ್ದರಿಂದ ಗದ್ದಲ, ತಂಟೆ, ತಕರಾರು ಸಾಮಾನ್ಯವಾಗಿ ಕಂಡು ಬಂದಿತು. ಇದರಿಂದ ನಿತ್ಯ ಬ್ಯಾಂಕಿನ ಮೂಲಕ ವ್ಯಾಪಾರ-ವಹಿವಾಟು ಮಾಡುವ ವ್ಯಾಪಾರಸ್ಥರು, ಗ್ರಾಹಕರು ಮತ್ತು ಇದೀಗ ಕೃಷಿ ಸಾಲ ಮರುಪಾವತಿ ಕೆಲಸಕ್ಕೆ ಸಾಕಷ್ಟು ಅಡ್ಡಿಯಾಗಿದ್ದು ಪರ್ಯಾಯ ವ್ಯವಸ್ಥೆಯಾಗಬೇಕು ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿವೆ.

# ಕನ್ನಡ ಭಾಷಾ ವಿಶೇಷ ಪಾಠ ಬೋಧನೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಮನೋರಮಾ ಮಹಾವಿದ್ಯಾಲಯದಲ್ಲಿ ಬಿಸಿಎ ವಿದ್ಯಾರ್ಥಿಗಳಿಂದ ಕನ್ನಡ ಭಾಷಾ ವಿಶೇಷ ಪಾಠ ಯೋಜನೆಯನ್ನು ಏರ್ಪಡಿಸಲಾಗಿತ್ತು.

ಬಿಸಿಎ ವಿದ್ಯಾರ್ಥಿಗಳು ವಿವಿಧ ಪಾಠ ಯೋಜನೆಗಳನ್ನು ಪ್ರಸ್ತುತಪಡಿಸಿ, ಜ್ಞಾನದ ಪ್ರತಿಭೆಯನ್ನು ಹೊರಹಾಕುವುದರ ಮೂಲಕ ಉಪನ್ಯಾಸಕರ ಪ್ರೀತಿಗೆ ಪಾತ್ರರಾದರು. ಕನ್ನಡ ಉಪನ್ಯಾಸಕ ಸಂಗಮೇಶ



ಹಾದಿಮನಿ ಪಾಠ ಯೋಜನೆಗಳನ್ನು ವೀಕ್ಷಿಸಿ, ಪ್ರತಿಯೊಬ್ಬರೂ ವರ್ಗ ಕೋಣೆಯ ವೇದಿಕೆಯನ್ನು ಸರಿಯಾಗಿ ಬಳಸಿಕೊಂಡಲ್ಲಿ ಆತ್ಮ ಸ್ಥೈರ್ಯ ಹೆಚ್ಚಾಗುವುದು ಎಂದು ತಿಳಿಸಿ, ಕನ್ನಡ ಭಾಷೆಯ ಉಳಿವಿಗಾಗಿ ಕನ್ನಡ ಸಾಹಿತ್ಯ ಅಧ್ಯಯನ ಅವಶ್ಯಕ ಎಂದರು.

### ಶ್ರೀ ಅನ್ನದಾನೇಶ್ವರ ಮಹಾವಿದ್ಯಾಲಯದ ನಾಯಕತ್ವ ಶಿಬಿರದಲ್ಲಿ ಅನಿಲ ವೈದ್ಯ ಕರೆ

# ಉತ್ತಮ ನಾಯಕರಾಗಿ ಸೇವೆಗೆ ಸನ್ನದ್ಧರಾಗಿ

**■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ನಿಮ್ಮಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವಲ್ಲಿ ಈ ನಾಯಕತ್ವದ ಶಿಬಿರವು ಸಹಕಾರಿಯಾಗಿದೆ. ಇದರ ಪ್ರಯೋಜನವನ್ನು ನೀವುಗಳೆಲ್ಲ ಪಡೆದುಕೊಂಡು ಉತ್ತಮ ನಾಯಕರಾಗಿ ಹೊರಹೊಮ್ಮಿ, ನಾಡಿನ ಸೇವೆಗೆ ಸನ್ನದ್ಧರಾಗಬೇಕೆಂದು ನಿವೃತ್ತ ಪ್ರಾಚಾರ್ಯ ಅನಿಲ ವೈದ್ಯ ಹೇಳಿದರು.



ನರೇಗಲ್ಲದ ಶ್ರೀ ಅನ್ನದಾನೇಶ್ವರ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವ ನಾಯಕತ್ವ ಶಿಬಿರದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ರಾಷ್ಟ್ರೀಯ ಸೇವಾ ಯೋಜನೆಯ ಕಲ್ಪನೆಯೇ ಅದ್ಭುತ. ಇದರಿಂದ ನಿಮ್ಮಲ್ಲಿ ಶಿಸ್ತು ಮತ್ತು ಮಾನವೀಯ ಗುಣಗಳು ಮೂಡಲು ಸಹಾಯವಾಗುತ್ತದೆ. ಇಲ್ಲಿನ ಶಿಸ್ತನ್ನು ನೀವು ನಿಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡಿದ್ದೇ ಆದರೆ, ನಿಮ್ಮ ಜೀವನ ಉನ್ನತ ಮಟ್ಟಕ್ಕೇರುವುದರಲ್ಲಿ ಯಾವುದೇ ಸಂದೇಹವಿಲ್ಲವೆಂದರು.

ಜಾನಪದ ಕಲಾವಿದ ಗವಿಸಿದ್ದಯ್ಯ ಹಳ್ಳಿಕೇರಿಮಠ ಮಾತನಾಡಿ, ಈಗಿನ ಜಾನಪದ ಹಾಡುಗಳು ಕೇಳಲು ಬಹಳಷ್ಟು ಅಸಹ್ಯಕರವಾಗಿವೆ. ಅವುಗಳನ್ನು ನೀವು ರೂಢಿಸಿಕೊಂಡು ನಿಮ್ಮ ವ್ಯಕ್ತಿತ್ವವನ್ನು ಹಾಳು ಮಾಡಿಕೊಳ್ಳಬೇಡಿ. ನಿಜವಾದ ಜಾನಪದ ಹಾಡುಗಳನ್ನು ರೂಢಿಸಿಕೊಂಡರೆ ನಿಮಗೆ ಉತ್ತಮ ಸ್ಥಾನ ದೊರಕುತ್ತದೆ ಎಂದು ಅಭಿಪ್ರಾಯಪಟ್ಟರು.

ನಿವೃತ್ತ ಮುಖ್ಯೋಪಾಧ್ಯಾಯ ಅರುಣ ಬಿ ಕುಲಕರ್ಣಿ ಮಾತನಾಡಿ, ನಿಮ್ಮ ಜೀವನದ ಬೆಳಕಿಗೆ ಅಧ್ಯಯನ ಅವಶ್ಯಕ. ನೀವು ಸತತ ಅಧ್ಯಯನಶೀಲರಾಗಿರಬೇಕು. ಪಠ್ಯವನ್ನು ಓದಿ ಬೇಸರವಾದಾಗ ಕನ್ನಡ ಸಾಹಿತ್ಯದ ಪುಸ್ತಕಗಳನ್ನು ಓದಿ. ಇದರಿಂದ ನಿಮ್ಮ ಜ್ಞಾನದ ವಿಕಾಸವಾಗುತ್ತದೆ ಮತ್ತು ವ್ಯಕ್ತಿತ್ವ ಅರಳುತ್ತದೆ ಎಂದು ಶಿಬಿರಾರ್ಥಿಗಳಿಗೆ ಓದಿನ ಮಹತ್ವವನ್ನು ತಿಳಿಸಿದರು.

ವೇದಿಕೆಯ ಮೇಲೆ ಸಂಸ್ಥೆಯ ಆಡಳಿತಾಧಿಕಾರಿ ಎನ್ ಆರ್ ಗೌಡರ, ಸದಸ್ಯ ನಿಂಗನಗೌಡ ಲಕ್ಕನಗೌಡ್ರ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ. ಕಲ್ಲಯ್ಯ ಹಿರೇಮಠ, ಡಾ. ರತ್ನಾ ಪಾಟೀಲ ಉಪಸ್ಥಿತರಿದ್ದರು. ಪ್ರಾಚಾರ್ಯ ಎಸ್ ಜಿ ಕೇಶಣ್ಣವರ ಅಧ್ಯಕ್ಷತೆ ವಹಿಸಿದ್ದರು. ಶಿಬಿರಾರ್ಥಿಗಳು ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿದರು.

# ಕಲ್ಮೇಶ್ವರ ಕಾಲೇಜು ಕಬಡ್ಡಿ ತಂಡ ರನ್ನರ್ ಅಪ್

▸▸ ಮೊದಲನೇ ಪುಟದಿಂದ

ಸ್ವರಾಜ ಜಾಧವ, ಬ್ರಹ್ಮಾನಂದ ಯರಗೊಪ್ಪ, ಸಚಿನ ಇಂಗಳಗಿ, ಪ್ರದೀಪ ಪೂಜಾರಿ, ವಿಜಯ ಕೊರಮ್, ಶಶಿಧರ ಇಬ್ರಾಹಿಮಪುರ, ಶ್ರೀಧರ ನಾಯಕ ಆಸೀಫ್ ಗುಳಗುಳಿ, ನಾಗರಾಜ ಹುಡೇದ, ಮಹೇಶ ಮಂಟೂರ ಪಾಲ್ಗೊಂಡಿದ್ದರು.

ತಂಡದ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಬಿ ಸಿ ಪಾಟೀಲ, ಕಾರ್ಯದರ್ಶಿ ಎಂ ಎನ್ ತೇಜಿಗೌಡ್ರ, ನಿರ್ದೇಶಕ ಮಂಡಳಿ, ಪ್ರಾಚಾರ್ಯ ಡಾ. ಎಂ ಎನ್ ಕಡಪಟ್ಟಿ, ತಂಡದ ಸಂಚಾಲಕ ಪ್ರೊ. ಸಂತೋಷ ಮಾಳವಾಡ, ಕ್ರೀಡಾ ಸಂಘದ ಕಾರ್ಯಾಧ್ಯಕ್ಷ ಪ್ರೊ. ಎನ್ ಆರ್ ಸಕ್ಕರಗೌಡರ, ಬಾಹ್ಯ ತರಬೇತುದಾರರಾದ ಎಂ ಎಚ್ ಸೋಮನಕಟ್ಟಿ ಮತ್ತು ಮಹಾವಿದ್ಯಾಲಯದ ಸರ್ವ ಸಿಬ್ಬಂದಿವರ್ಗದವರು ಅಭಿನಂದಿಸಿದಾರೆ.

# ರಾಷ್ಟ್ರ ಮಟ್ಟದ ಓಪನ್ ಕರಾಟೆ ಪಂದ್ಯಾವಳಿಯಲ್ಲಿ ಸಾಧನೆ



**■ ವಿಜಯಸಾಕ್ಷಿ ಸುದ್ದಿ, ಗದಗ**

ಇತ್ತೀಚೆಗೆ ಗದುಗಿನಲ್ಲಿ ನಡೆದ ಮೊದಲನೆಯ ಗದಗ ಓಪನ್ 'ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್‌ಶಿಪ್-2023' ಕರಾಟೆ ಪಂದ್ಯಾವಳಿಯಲ್ಲಿ ವಿಜಯ ಕರಾಟೆ ಕ್ಲಬ್ ಬೆಟಗೇರಿ ಹಾಗೂ ಒಕ್ಕಲಗೇರಿ ಓಣಿಯ ಕ್ರೀಡಾಪಟುಗಳು ಭಾಗವಹಿಸಿ ಸಾಧನೆಗೈದಿದ್ದಾರೆ.

ಸಹನಾ ಭಜಂತ್ರಿ-ಕಟಾಜ್, ಕುಮಿಟೆ ಪ್ರಥಮ, ಚಿನ್ಮಯ ತಟ್ಟೆ-ಕಟಾಜ್ ಪ್ರಥಮ, ದರ್ಶನ ಶ್ಯಾವಿ-ಕಟಾಜ್ ಪ್ರಥಮ, ಮುತ್ತುರಾಜ ಶ್ಯಾವಿ-ಕಟಾಜ್ ತೃತೀಯ, ನಿಖಿಲ್ ಸೊಮಸಾಳ-ಕಟಾಜ್ ದ್ವಿತೀಯ, ಕುಮಿಟೆ ತೃತೀಯ, ಸುನೀಲ್ ಚಲವಾದಿ-ಕಟಾಜ್ ತೃತೀಯ, ರೋಹನ್ ಗಾಳಿ-ಕಟಾಜ್, ಕುಮಿಟೆ ಪ್ರಥಮ, ಆದಿತ್ಯಾ ಗಾಳಿ-ಕಟಾಜ್ ದ್ವಿತೀಯ, ರಾಜಬಕ್ಷೀ ಹುಯಿಲಗೋಳ-ಕಟಾಜ್ ತೃತೀಯ, ಕೇತನ್ ಪಾವರ್-ಕಟಾಜ್ ತೃತೀಯ, ಅರ್ಜುನ ಕಣವಿ-ಕಟಾಜ್ ತೃತೀಯ, ಸುನಿಲ್ ಹೊಂಬಳ-ಕಟಾಜ್ ಪ್ರಥಮ, ಶಂಕರ ಸುಂಕದ-ಕಟಾಜ್ ಪ್ರಥಮ, ಮನಿಶಾ ಕಲಾಲ್-ಕಟಾಜ್ ದ್ವಿತೀಯ, ಜೈದೀಪ ಉಳ್ಳಾಗಡ್ಡಿ-ಕಟಾಜ್ ದ್ವಿತೀಯ, ಪ್ರೀತಮ್ ಅರ್ಕಸಾಲಿ-ಕುಮಿಟೆ ತೃತೀಯ, ಕಟಾಜ್ ದ್ವಿತೀಯ, ಜೀವನ ಮಲ್ಲಾಡದ-ಕುಮಿಟೆ ತೃತೀಯ, ಕಟಾಜ್ ದ್ವಿತೀಯ, ವೈಷ್ಣವಿ ಕುಕನೂರ-ಕಟಾಜ್ ದ್ವಿತೀಯ-ಶ್ರೀದೇವಿ ಕುಲಕರ್ಣಿ-ಕಟಾಜ್ ದ್ವಿತೀಯ, ಶಿತಲ್ ಕಲಾಲ್-ಕಟಾಜ್ ದ್ವಿತೀಯ, ತನು ಗಾಂಜೀ-ಕಟಾಜ್ ತೃತೀಯ, ಅಭಿಷೇಕ ಮಾಲಿಪಾಟೀಲ-ಕಟಾಜ್ ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ.

ಒಟ್ಟು 22 ಪ್ರಶಸ್ತಿಗಳನ್ನು ಪಡೆದಿದ್ದು, ಎಲ್ಲಾ ವಿಜೇತರಿಗೆ ವಿಜಯ ಕರಾಟೆ ಅಸೋಸಿಯೇಷನ್ ಸಂಘದ ಅಧ್ಯಕ್ಷ ಟಾಕ್ಕಪ್ಪಾ ಎಸ್ ಕಲಾಲ, ಉಪಾಧ್ಯಕ್ಷ ಬಸಯ್ಯ ಪಸಗಿಮಠ, ಖಜಾಂಚಿ ವೀರಬಸಯ್ಯ ಹೀರೆಮಠ, ಸದಸ್ಯರಾದ ಪ್ರವೀಣ್ ನಂದಿಕೋಲಮಠ, ಮಂಜುನಾಥ ಕಲಾಲ, ಮುಖ್ಯ ತರಬೇತುದಾರರಾದ ವಿಜಯಕುಮಾರ ಎಸ್ ಕಲಾಲ ಹಾಗೂ ವಿಜಯಕುಮಾರ ಆರ್ ಓದುಸುಮಠ ಅಭಿನಂದನೆ ಸಲ್ಲಿಸಿದ್ದಾರೆ.

# ಪೊಲೀಸರ ಮಿಂಚಿನ ಕಾರ್ಯಾಚರಣೆ: 67 ಬೈಕ್ ಜಪ್ತಿ

▸▸ ಮೊದಲನೇ ಪುಟದಿಂದ

ಸಂದರ್ಭದಲ್ಲಿ ಡಿವೈಎಸ್ಪಿ ಎಂ.ಬಿ ಸಂಕದ ಮಾತನಾಡಿ, ಜಿಲ್ಲೆಯಾದ್ಯಂತ ದೋಷಪೂರಿತ ಸೈಲನ್ಸರ್ ಅಳವಡಿಸಿಕೊಂಡು ತಿರುಗಾಡುವವರ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ.

ಪಾಲಕರು ಅಪ್ರಾಪ್ತ ವಯಸ್ಸಿನ ಮಕ್ಕಳ ಕೈಗೆ ಬೈಕ್ ಕೊಡುವದನ್ನು ಕೈಬಿಡಬೇಕು. ವಶಪಡಿಸಿಕೊಂಡ ಬೈಕುಗಳಿಗೆ ದಂಡ ವಿಧಿಸಲಾಗುವದು ಎಂದರು.

ಪೊಲೀಸರ ಈ ಕಾರ್ಯದಿಂದ ಕೆಲ ಯುವಕರು ಬೈಕ್‌ಗಳಿಗೆ ಕರ್ಕಶ ಶಬ್ದ ಮಾಡುವ ಸೈಲೆನ್ಸರ್ ಅಳವಡಿಸಿ ಶಾಲಾ ಕಾಲೇಜುಗಳ ಸಾರ್ವಜನಿಕ ಸ್ಥಳಗಳಲ್ಲಿ ಬೇಕಾಬಿಟ್ಟಿ ತಿರುಗಾಡುವುದು, ಕಿರಿಕಿರಿಯನ್ನುಂಟು ಮಾಡುವುದು ತಪ್ಪುತ್ತದೆ. ಪೊಲೀಸರ ಕೆಲಸದ ಬಗ್ಗೆ ಪ್ರಶಂಸೆಯ ಮಾತುಗಳು ಕೇಳಿ ಬಂದವು.

ಸಿಪಿಐ ವಿಕಾಸ ಲಮಾಣಿ, ಬಿ.ಎಸ್ ಸುಬ್ಬಾಪುರಮಠ, ಅಶೋಕ ಸದಲಗಿ, ಪಿಎಸ್‌ಐ ಯೂಸುಫ್ ಜಮುಲಾ, ವಿ.ಜಿ ಪವಾರ, ವಿಜಯ ತಳವಾರ, ಎಸ್.ಎ ಶಕುಂತಲಾ, ನೂರಜಹಾನ, ಎಸ್.ಬಿ ಕವಲೂರ, ಗಿರಿಜಾ ಜಕ್ಕಲಿ ಸೇರಿ ಸಿಬ್ಬಂದಿಗಳು ಇದ್ದರು.

# ಕೆಎಸ್‌ಆರ್‌ಟಿಸಿ ಚಾಲಕನ ಆತ್ಮಹತ್ಯೆ ಯತ್ನದಲ್ಲಿ ರಾಜಕೀಯವಿಲ್ಲ

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಕೆಎಸ್‌ಆರ್‌ಟಿಸಿ ಚಾಲಕ ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣಕ್ಕೆ ವೈಯಕ್ತಿಕ ಕಾರಣವೇ ಹೊರತು ರಾಜಕೀಯ ಒತ್ತಡ ಅಥವಾ ಪ್ರಚೋದನೆ ಇಲ್ಲ ಎಂದು ಸಿಐಡಿ ವರದಿ ನೀಡಿದೆ.

ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರ ನಡುವಿನ ಸಂಘರ್ಷಕ್ಕೆ ಕಾರಣವಾಗಿದ್ದ ಈ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆಗೆ ವಹಿಸಲಾಗಿತ್ತು. ಸದನದಲ್ಲಿ ಮಾಜಿ ಸಿಎಂ ಎಚ್ ಡಿ ಕುಮಾರಸ್ವಾಮಿ ಹಾಗೂ ಸಚಿವ ಚೆಲುವರಾಯಸ್ವಾಮಿ ನಡುವಿನ ವಾಗ್ಯುದ್ಧಕ್ಕೂ ಕಾರಣವಾಗಿತ್ತು. ಆದರೆ ವರದಿ ಬಗ್ಗೆ ಕಾಂಗ್ರೆಸ್ ಸದಸ್ಯ ನರೇಂದ್ರ ಸ್ವಾಮಿ ಆಕ್ಷೇಪ ವ್ಯಕ್ತಪಡಿಸಿ, ವರದಿ ನ್ಯಾಯೋಚಿತವಾಗಿಲ್ಲ. ಇದರಲ್ಲಿ ಯಾರನ್ನೋ ರಕ್ಷಣೆ ಮಾಡುವ ಉದ್ದೇಶ ಇದೆ ಎಂದರು.

# ನೋಂದಣಿ ವಿಳಂಬವಾದಲ್ಲಿ ಶಿಸ್ತು ಕ್ರಮ

▸▸ ಮೊದಲನೇ ಪುಟದಿಂದ

ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ 365, ಪಟ್ಟಣ ಪ್ರದೇಶಗಳಲ್ಲಿ 19 ಒಟ್ಟು 384 ನೋಂದಣಿ, ಉಪನೋಂದಣಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಜನವರಿ-2023 ರಿಂದ 2023 ಜುಲೈ 10 ರವರೆಗೆ ಗ್ರಾಮೀಣ ಪ್ರದೇಶದಲ್ಲಿ 994 ಹಾಗೂ ಪಟ್ಟಣ ಪ್ರದೇಶಗಳಲ್ಲಿ 7227 ಒಟ್ಟು 8221 ಜನನ ನೋಂದಣಿಗಳಾಗಿದ್ದು, ಇದರಲ್ಲಿ 6562 ನೋಂದಣಿಗಳು ಕಾಲಮಿತಿಯೊಳಗಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ಶೇ.45.17ರಷ್ಟು, ಪಟ್ಟಣ ಪ್ರದೇಶದಲ್ಲಿ ಶೇ.84.50 ರಷ್ಟು ಒಟ್ಟಾರೆ ಜಿಲ್ಲೆಯಲ್ಲಿ ಶೇ.79.82 ರಷ್ಟು ನೋಂದಣಿ ಕಾರ್ಯವು ಕಾಲಮಿತಿಯೊಳಗೆ ಮಾಡಲಾಗಿರುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು.

> ಬೆಳೆ ಸಮೀಕ್ಷೆ ಹಾಗೂ ಬೆಳೆ ಕಟಾವು ಪ್ರಯೋಗ ಕುರಿತ ಪ್ರಗತಿ ಪರಿಶೀಲಿಸಿದ ಅವರು, ಬೆಳೆ ಸಮೀಕ್ಷೆ ಹಾಗೂ ಬೆಳೆ ಕಟಾವು ಪ್ರಯೋಗಗಳನ್ನು ಕಂದಾಯ ಹಾಗೂ ಕೃಷಿ ಇಲಾಖೆಗಳು ಸಮನ್ವಯದೊಂದಿಗ ಕಾರ್ಯನಿರ್ವಹಿಸುವದರ ಮೂಲಕ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ಬೆಳೆ ಕಟಾವು ಪ್ರಯೋಗವು ಬೆಳೆ ವಿಮೆಗೆ ಸಂಬಂಧಿಸಿದ್ದಾಗಿದ್ದು ಈ ಗಂಭೀರವಾದ ವಿಷಯದಲ್ಲಿ ಉದಾಸೀನತೆ, ವಿಳಂಭ ಧೋರಣೆ ತೋರುವದರ ಮೂಲಕ ಸಮಸ್ಯೆಗಳು ತಲೆದೋರಿದಲ್ಲಿ ಸಂಬಂಧಿಸಿದ ಅಧಿಕಾರಿ ಸಿಬ್ಬಂದಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಾಗುವದು ಎಂದು ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಅವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಗಂಗಪ್ಪ ಎಂ, ಕೃಷಿ ಇಲಾಖೆ ಜಂಟಿ ನಿರ್ದೇಶಕಿ ತಾರಾಮಣಿ, ಜಿಲ್ಲಾ ನೋಂದಣಿ ಅಧಿಕಾರಿ ಮಹಾಂತೇಶ ಪಟಗಾರ, ಜಿಲ್ಲಾ ಆರ್.ಸಿ.ಎಚ್. ಅಧಿಕಾರಿ ಡಾ.ಬಿ.ಎಮ್.ಗೊಜನೂರ ಸೇರಿದಂತೆ ತಹಸೀಲ್ದಾರರು, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಹಾಜರಿದ್ದರು.

# ಧೋ ಎಂದು ಸುರಿಯುತ್ತಿರೋ ಮಳೆ.......







**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**


ಕಳೆದೊಂದು ವಾರದಿಂದ ಸೋನೆ ಮಳೆಯಂತೆ ಸುರಿಯುತ್ತಿರುವ ಮಳೆ ಒಂದೆಡೆ ಹರ್ಷವನ್ನುಂಟು ಮಾಡಿದ್ದರೆ ಮತ್ತೊಂದೆಡೆ ಜನಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.

ಬಿಟ್ಟೂ ಬಿಡದೇ ಧೋ ಎಂದು ಸುರಿಯುತ್ತಿರುವ ಮಳೆಯಿಂದಾಗಿ ಕೃಷಿ ಚಟುವಟಿಕೆಗಳಿಗೆ ಅಡ್ಡಿಯಾಗಿದೆ. ಇನ್ನೂ ಬಿತ್ತನೆ ಕಾರ್ಯ ಬಾಕಿ ಇದ್ದು, ಬೆಳೆದ ಪೈರುಗಳ ನಡುವೆ ಹೆಡೆ ಕುಂಟೆ ಹೊಡೆಯಲಾಗದೇ ಕಳೆ ಹೆಚ್ಚಿವೆ. ಮಸಾರಿ ಜಮೀನುಗಳಲ್ಲಿನ ಸಣ್ಣ ಬೆಳೆಗೆ ತೇವಾಂಶ ಹೆಚ್ಚಿ ಬೆಳೆ ಹಳದಿಯಾಗುತ್ತಿದೆ.

ಪಟ್ಟಣ ಸೇರಿ ಗ್ರಾಮೀಣ ಭಾಗದ ರಸ್ತೆಗಳಲ್ಲಿ ಬಿದ್ದಿರುವ ಅಪಾರ ಪ್ರಮಾಣ ತಗ್ಗು ಗುಂಡಿಗಳು, ಕೆಸರಿನಿಂದ ರಸ್ತೆಗಳ ಸ್ಥಿತಿ ಅಯೋಮಯವಾಗಿದೆ. ರೈತ ಸಂಪರ್ಕ ರಸ್ತೆಗಳ ಸ್ಥಿತಿಯಂತೂ ಹೇಳ ತೀರದು. ಬೆಳಿಗ್ಗೆ ಪೇಪರ್, ಹಾಲು, ತರಕಾರಿ ಮಾರುವವರು ಪರದಾಡುವಂತಾಗಿದೆ. ವ್ಯಾಪಾರ-ವಹಿವಾಟಿನ ಮೇಲೂ ಪರಿಣಾಮ ಬೀರಿದೆ. ಮಣ್ಣಿನ ಮನೆಗಳು ಜಂತ್ವಾನ ಹಿಡಿದು ಸೋರುತ್ತಿದ್ದು ಮನೆಗಳಿಗೆ ಪ್ಲಾಸ್ಟಿಕ್ ಹೊದಿಕೆ ಹಾಕಿದ್ದಾರೆ. ರೈತರಿಗೆ ಜಾನುವಾರು ಜೋಪಾನ ಕಷ್ಟವಾಗಿದೆ. ಶಾಲಾ ಮಕ್ಕಳು ಮಳೆಯಲ್ಲೇ ನೆನೆಯುವಂತಾಗಿದೆ. ಬಿಸಿಲೇ ಬೀಳದ್ದರಿಂದ ಬಟ್ಟೆಗಳು ಒಣಗುತ್ತಿಲ್ಲ, ಶೀತಗಾಳಿಯಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಕಾರಣ ಜನತೆ ಹಳೆ ಬಟ್ಟೆ, ಜರ್ಕಿನ್, ಸ್ವೆಟರ್‌ಗಳಿಗೆ ಮೊರೆ ಹೋಗಿದ್ದಾರೆ. ಒಟ್ಟಿನಲ್ಲಿ ಮಲೆನಾಡಿನ ವಾತಾವರಣ ಸೃಷ್ಟಿಯಾಗಿದೆ. ಆದರೂ ಜನತೆ ಮಳೆ ಬಂದರೆ ಕೇಡಲ್ಲ ಎಂಬ ಭಾವನೆ ವ್ಯಕ್ತಪಡಿಸುತ್ತಿದ್ದಾರೆ.

## ಉತ್ತರ ಕರ್ನಾಟಕದ ಸಹ್ಯಾದ್ರಿಯಲ್ಲಿ ಅಧಿಕಾರಿಗಳಿಂದ ವೈಜ್ಞಾನಿಕ ಸಮೀಕ್ಷೆ

# ಸಂಪದ್ಭರಿತ ಕಪ್ಪತಗುಡ್ಡದಲ್ಲಿ ಪ್ರಾಥಮಿಕ ಅಧ್ಯಯನ







■ವಿಜಯಸಾಕ್ಷಿ ಸುದ್ದಿ, ಗದಗ

ಕಪ್ಪತ್ತಗುಡ್ಡ ವನ್ಯಜೀವಿ ಧಾಮವು ಗದಗ ಜಿಲ್ಲೆಯ ಬಿಂಕದಕಟ್ಟಿಯಿಂದ ಮುಂಡರಗಿ ತಾಲ್ಲೂಕಿನ ಶಿಂಗಟಾಲೂರುವರೆಗೆ ಸುಮಾರು 65 ಕಿ.ಮೀ.ಗಳಷ್ಟು ಉದ್ದಕ್ಕೆ ಚಾಚಿಕೊಂಡಿದೆ. ಈ ಗುಡ್ಡಗಳಲ್ಲಿ ಕತ್ತೆ ಕಿರುಬ, ತೋಳ, ಚಿರತೆ, ನರಿ, ಗುಳ್ಳೆನರಿ, ರಸ್ಟಿ ಸ್ಪಾಟೆಡ್ ಬೆಕ್ಕು, ಕಾಡು ಬೆಕ್ಕು, ಪುನಗು ಬೆಕ್ಕು, ಚುಕ್ಕೆ ಜಿಂಕೆ, ಕೃಷ್ಣಮೃಗ, ಕೊಂಡುಕುರಿ, ಚಿಂಕಾರ, ಮುಳ್ಳುಹಂದಿ, ಕಾಡುಹಂದಿ ಇತ್ಯಾದಿ ಪ್ರಾಣಿಗಳು, ನವಿಲು, ಕೌಜಗ, ಗೂಬೆ, ಹದ್ದು ಮುಂತಾದ ಪಕ್ಷಿಗಳು, ಹೆಬ್ಬಾವು, ಉಡ, ಕೊಳಕಮಂಡಲ, ನಾಗರಹಾವು, ಕಟ್ಟಹಾವು, ಗರಗಸ ಮಂಡಲ, ಮಣ್ಣುಮುಕ್ಕು ಹಾವು ಮುಂತಾದ ಸರೀಸೃಪಗಳು, ತಾರೆ, ಅಳಲೆ, ಬೀಟೆ, ತೇಗ,



ಶ್ರೀಗಂಧ, ನೆಲ್ಲಿ, ಅಂಜನ, ಬೇವು, ತಪಸಿ, ದಿಂಡಲ್, ಕಕ್ಕೆ ತುಗ್ಗಲಿ, ಮಶವಾಳ ಇತ್ಯಾದಿ ವೃಕ್ಷ ಸಂಪತ್ತಷ್ಟೇ ಅಲ್ಲದೆ, ಅಂಟವಾಳ, ತುಳಸಿ, ನೆಲಬೇವು, ಲೋಳೆಸರ, ಕಣಗಲಿ, ಆಡುಸೋಗೆ, ಎಕ್ಕೆ, ಉತ್ತರಾಣಿ ಮುಂತಾದ ಔಷಧೀಯ ಸಸ್ಯಗಳ ಭಂಡಾರವೇ ಅಡಗಿದೆ.

> ಮೊಟ್ಟಮೊದಲ ಬಾರಿಗೆ ಅತೀ ಅಪರೂಪದ ಪ್ರಾಣಿಗಳಾದ ಚಿಂಕಾರ, ರಸ್ಟಿ ಸ್ಪಾಟೆಡ್ ಬೆಕ್ಕು, ನಿಶಾಚರ ಪ್ರಾಣಿಗಳಾದ ಕತ್ತೆಕಿರುಬ, ಚಿರತೆ, ನರಿ, ಕಾಡುಬೆಕ್ಕು, ಚುಕ್ಕೆ ಜಿಂಕೆ, ಕೃಷ್ಣಮೃಗ ಹಾಗೂ ಇತರೆ ಪ್ರಾಣಿಗಳು ಕ್ಯಾಮರಾ ಟ್ರ್ಯಾಪ್‌ನಲ್ಲಿ ಸಿಕ್ಕಿರುವುದು, ವಿಶೇಷವಾಗಿ ಕಪ್ಪತ್ತಗುಡ್ಡದಲ್ಲಿ 3 ಜಾತಿಯ ಹುಲ್ಲೆಗಳು (ಆ್ಯಂಟಿಲೋಪ್) ಕಂಡುಬಂದಿವೆ. ಈ ಅಧ್ಯಯನದಲ್ಲಿ ವಿಶೇಷ ಸಾಫ್ಟವೇರ್‌ಗಳ ಮುಖಾಂತರ ಪ್ರತ್ಯೇಕವಾಗಿ ಚಿರತೆ ಹಾಗೂ ಹೈನಾ ಸಂಖ್ಯೆಯನ್ನು ಕಂಡು ಹಿಡಿಯಲಾಗಿದೆ. ಹೈನಾಗಳು ನಮ್ಮ ಸಮೃದ್ಧ ಕಪ್ಪತ್ತಗುಡ್ಡ ವನ್ಯಜೀವಿ ಧಾಮದಲ್ಲಿ ಸತ್ತ ಪ್ರಾಣಿಗಳ ಮಾಂಸವನ್ನು ತಿಂದು ಅವುಗಳಿಂದ ಯಾವುದೇ ರೋಗ ಹರಡದಂತೆ, ಕಾಡು ಶುದ್ಧವಾಗಿರುವಂತೆ ನೋಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿವೆ.
>
> – ದೀಪಿಕಾ ಬಾಜ್‌ಪೈ, ಭಾ.ಅ.ಸೇ.
> ಉಪ ಅರಣ್ಯ ಸಂರಕ್ಷಣಾಧಿಕಾರಿ, ಗದಗ.

ಲೈನ್‌ಟ್ರಾನ್ಸಕ್ಟ್ ವಿಧಾನ: 2 ಕಿ.ಮೀ. ಉದ್ದದ ಹಾಗೂ 1 ಮೀ. ಅಗಲದ Strip lineನಲ್ಲಿ ಸಂಚರಿಸಿದ ಸಸ್ಯಹಾರಿ ಪ್ರಾಣಿಗಳ ಸಂಖ್ಯೆಯನ್ನು ದಾಖಲಿಸಿ, ಅದೇ ಮಾರ್ಗವಾಗಿ ಹಿಂದಿರುಗಿ ಬರುವ ಸಮಯದಲ್ಲಿ ಈ ಪ್ರಾಣಿಗಳ ಹಿಕ್ಕೆಗಳನ್ನು ವೀಕ್ಷಣೆ ಮಾಡಲಾಗಿದೆ. ಈ ಮಾರ್ಗದಲ್ಲಿ ಕಂಡುಬರುವ ಪ್ರತಿಯೊಂದು ಗಿಡಮರಗಳ ಜಾತಿಯನ್ನು ಪಟ್ಟಿ ಮಾಡಲಾಗಿದೆ.

ಇದೇ ಕಾರಣದಿಂದ ಕಪ್ಪತ್ತಗುಡ್ಡವನ್ನು 'ಉತ್ತರ ಕರ್ನಾಟಕದ ಸಹ್ಯಾದ್ರಿ' ಎಂದು ಕರೆಯಲಾಯಿತು. ನಂತರ ಸರ್ಕಾರವು ಇದನ್ನು ಮೇ 16, 2019ರಂದು 'ಕಪ್ಪತ್ತಗುಡ್ಡ ವನ್ಯಜೀವಿ ಧಾಮ'ವೆಂದು ಘೋಷಿಸಿತು. ಈ ವನ್ಯಜೀವಿ ಧಾಮದ ಹೆಚ್ಚಿನ ಅಧ್ಯಯನ ಮತ್ತು ಸಂಶೋಧನೆಗಳ

ಸ್ಕೈನ್‌ಸರ್ವೆ ವಿಧಾನ: 128 ಕಿ.ಮೀ. ಸಂಚರಿಸಿ, ಪ್ರಾಣಿಗಳ ಮಲದ ನಮೂನೆ, ಮರದ ಮೇಲೆ ಮತ್ತು ಅರಣ್ಯ ಪ್ರದೇಶದಲ್ಲಿ ಪರಚಿದ ಗುರುತುಗಳನ್ನು ವಿಕ್ಷಿಸಲಾಗಿದೆ. ಪರಭಕ್ಷಕ ಪ್ರಾಣಿಗಳ ಮಲದ ನಮೂನೆಗಳನ್ನು ಸಂಗ್ರಹಿಸಿ ಅದರ ಆಹಾರ ಪದ್ಧತಿಯನ್ನು ಕಂಡು ಹಿಡಿಯಲು ಹೆಚ್ಚಿನ ಅಧ್ಯಯನಕ್ಕಾಗಿ Wildlife Institute of India (WII) ಡೆಹರಾಡೂನ್‌ಗೆ ಕಳುಹಿಸಲಾಗಿದೆ.

ಅಗತ್ಯತೆಯ ಹಿನ್ನೆಲೆಯಲ್ಲಿ ವಲಯ ಅರಣ್ಯಾಧಿಕಾರಿಗಳಾದ ಮಹೇಶ ಮರೇಣ್ಣವರ, ಸುಮಾ ಹಳೆಹೊಳಿ ಹಾಗೂ ಉಪ ವಲಯ ಅರಣ್ಯಾಧಿಕಾರಿ ಸೋಮನಗೌಡ ಪಾಟೀಲರು ಡೆಹರಾಡೂನ್‌ನಲ್ಲಿರುವ ಪ್ರತಿಷ್ಠಿತ ಭಾರತೀಯ ವನ್ಯಜೀವಿ ಸಂಸ್ಥೆಯಲ್ಲಿ ವನ್ಯಜೀವಿ ನಿರ್ವಹಣೆ ಮತ್ತು ವೈಜ್ಞಾನಿಕ ತಂತ್ರಾಂಶಗಳ ಕುರಿತು ಮೂರು ತಿಂಗಳ ವಿಶೇಷ ತರಬೇತಿಯನ್ನು ಪಡೆದಿದ್ದಾರೆ.

Wildlife Institute of India (WII) ಡೆಹರಾಡೂನ್, ಕಾಳಿ ಹುಲಿ ಸಂರಕ್ಷಿತ ಪ್ರದೇಶ ದಾಂಡೇಲಿ, ವನ್ಯಜೀವಿ ಘಟಕದ ಸಿಬ್ಬಂದಿ ಹಾಗೂ ಈ ವಿಭಾಗದ ಕಾರ್ಯಕಾರಿ ಮುಂಚೂಣಿ ಸಿಬ್ಬಂದಿಗಳ ಸಹಾಯದಿಂದ ಕಪ್ಪತ್ತಗುಡ್ಡ ವನ್ಯಜೀವಿ ಧಾಮದಲ್ಲಿರುವ ಸಸ್ಯ ಹಾಗೂ ಪ್ರಾಣಿಭಕ್ಷಕ ಪ್ರಾಣಿಗಳ ಸಂಖ್ಯೆಯ ಬಗ್ಗೆ ಪ್ರಾಥಮಿಕ ಅಧ್ಯಯನವನ್ನು ನಡೆಸಲಾಗಿದೆ.

ಕ್ಯಾಮರಾ ಟ್ರ್ಯಾಪ್ ವಿಧಾನ: ಕಪ್ಪತ್ತಗುಡ್ಡ ವನ್ಯಜೀವಿ ಧಾಮದಲ್ಲಿ 30 ದಿನಗಳ ಅವಧಿಗೆ 98 ಕ್ಯಾಮರಾ ಟ್ರ್ಯಾಪ್‌ಗಳನ್ನು ಅಳವಡಿಸಲಾಗಿದೆ. ಈ ಪ್ರದೇಶದಲ್ಲಿ 2ಥ2 ಸ್ಕ್ವೇರ್ ಕಿ.ಮೀ. ಅಂತರದಲ್ಲಿ ಒಂದು ಗ್ರಿಡ್ ಸ್ಥಾಪಿಸಲಾಗಿದೆ. ಒಂದು ಕ್ಯಾಮರಾ ಟ್ರ್ಯಾಪ್ ಪಾಯಿಂಟ್‌ನಿಂದ ಇನ್ನೊಂದು ಕ್ಯಾಮರಾ ಟ್ರ್ಯಾಪ್ ಪಾಯಿಂಟ್ ಕನಿಷ್ಠ 1.5 ಕಿ.ಮೀ. ದೂರದಲ್ಲಿರುತ್ತದೆ. ಇದರಲ್ಲಿ ಒಂದು ಕ್ಯಾಮರಾ ಪಾಯಿಂಟ್‌ನಲ್ಲಿ ಎದುರು-ಬದುರು ಕ್ಯಾಮರಾಗಳನ್ನು ಅಳವಡಿಸಲಾಗುತ್ತದೆ. ಈ ಕ್ಯಾಮರಾ ಟ್ರ್ಯಾಪ್‌ನಿಂದ ಸೆರೆ ಹಿಡಿದ ಛಾಯಾಚಿತ್ರಗಳಿಂದ ಕತ್ತೆಕಿರುಬ ದೇಹದ ಮೇಲಿರುವ ಪಟ್ಟೆಯ ಹಾಗೂ ಚಿರತೆಯ ದೇಹದ ರೋಸೆಟ್ ಮಾದರಿಯಿಂದ ಪ್ರತ್ಯೇಕವಾಗಿ ಈ ಪ್ರಾಣಿಗಳನ್ನು ಗುರುತಿಸಬಹುದಾಗಿದೆ.

---

### ಹೊಂಬಳದಲ್ಲಿ ಲಯನ್ಸ್ ಕ್ಲಬ್‌ದಿಂದ ಆರೋಗ್ಯ ಜಾಗೃತಿ ಕಾರ್ಯಕ್ರಮ

# ಒತ್ತಡದಿಂದ ಆರೋಗ್ಯದ ಮೇಲೆ ದುಷ್ಪರಿಣಾಮ



■ವಿಜಯಸಾಕ್ಷಿ ಸುದ್ದಿ, ಗದಗ

ಎಲ್ಲರೂ ಉತ್ತಮ ಆರೋಗ್ಯ ಕಾಯ್ದುಕೊಳ್ಳುವ ಮೂಲಕ ಉತ್ತಮ ಪರಿಸರ ನಿರ್ಮಾಣಕ್ಕೆ ಮುಂದಾಗಬೇಕು. ವಿಶೇಷವಾಗಿ ಕ್ಷಯ ರೋಗ ಬರದಂತೆ ಅವಶ್ಯಕ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಡಾ.ವೀರೇಶ್ ಹಂಚಿನಾಳ ಹೇಳಿದರು.

ಅವರು ಬುಧವಾರ ಗದಗ ತಾಲೂಕಿನ ಹೊಂಬಳದ ಪಿಯು ಕಾಲೇಜ್‌ದಲ್ಲಿ ಲಯನ್ಸ್ ಕ್ಲಬ್ ಗದಗ-ಬೆಟಗೇರಿ ಹಾಗೂ ಕೆ.ವ್ಹಿ. ಹಂಚಿನಾಳ ಫೌಂಡೇಶನ್‌ದಿಂದ ಏರ್ಪಡಿಸಿದ್ದ ಆರೋಗ್ಯ ಜಾಗೃತಿ ಅಭಿಯಾನ ಮತ್ತು ಕ್ಷಯ ರೋಗ ನಿರ್ಮೂಲನೆಯಲ್ಲಿ ವಿದ್ಯಾರ್ಥಿಗಳ ಪಾತ್ರ ವಿಷಯವಾಗಿ ಉಪನ್ಯಾಸ ನೀಡಿದರು.

ಆಧುನಿಕ ಇಂದಿನ ದಿನಗಳಲ್ಲಿ ನಾವೆಲ್ಲರೂ ಅವಸರ, ಒತ್ತಡದ ಜೀವನ ನಡೆಸುತ್ತಿದ್ದೇವೆ. ಸಮಾಧಾನ, ನೆಮ್ಮದಿ ಎಂಬುದಿಲ್ಲ. ಹೀಗಾದರೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿವೆ. ನಿಯಮಿತ ಆಹಾರ ಸೇವನೆ, ವಿಶ್ರಾಂತಿ, ಲಘು ವ್ಯಾಯಾಮ, ವಾಯು ವಿಹಾರ, ಯೋಗ, ಧ್ಯಾನ ಹೀಗೆ ಮುಂತಾದ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕೆಂದರು.

ಲಯನ್ಸ್ ಕ್ಲಬ್ ಅಧ್ಯಕ್ಷ ರಮೇಶ ಶಿಗ್ಲಿ ಮಾತನಾಡಿ, ಕ್ಲಬ್‌ನ ಕಾರ್ಯಚಟುವಟಿಕೆಗಳು ಕೇವಲ ನಾಲ್ಕು ಗೋಡೆಯ ಮಧ್ಯದಲ್ಲಿ ನಡೆಯುವದನ್ನು ತಪ್ಪಿಸಿ ಸೇವೆ ಮಾಡಲು ಜನರ ಬಾಗಿಲ ಬಳಿ ಕ್ಲಬ್ ಹೊರಟಿದ್ದು ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೆ ಇಂತಹ ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ಕ್ಲಬ್ ತನ್ನ ಸಾಮಾಜಿಕ ಸೇವೆಗೆ ಮುಂದಾಗಿದೆ ಎಂದರು.

ಲಯನ್ ಲೇಡಿ ಕ್ಲಬ್ ಅಧ್ಯಕ್ಷೆ ಸಾವಿತ್ರಿ ಶಿಗ್ಲಿ ಮಾತನಾಡಿ, ಮಹಿಳೆಯರು ಇಂದು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವದು ಅವಶ್ಯವಿದೆ ಎಂದರು. ಕಾರ್ಯಕ್ರಮದಲ್ಲಿ ಕ್ಲಬ್ ಕಾರ್ಯದರ್ಶಿ ಪ್ರವೀಣ ವಾರಕರ, ಖಜಾಂಚಿ ರಾಜು ಮಲ್ಲಾಡದ, ಲಯನ್ ಲೇಡಿ ಕ್ಲಬ್ ಕಾರ್ಯದರ್ಶಿ ಅಮೃತಾ ವಾರಕರ, ಖಜಾಂಚಿ ಸುರೇಖಾ ಮಲ್ಲಾಡದ, ಝಡ್.ಸಿ ದತ್ತು ಬೇವಿನಕಟ್ಟಿ, ಅನಿಲ ಕುಷ್ಟಗಿ, ವೀಣಾ ಸುಲಾಖೆ, ಪೂಜಾ ಪಾಟೀಲ ಸೇರಿದಂತೆ ಎರಡೂ ಕ್ಲಬ್‌ನ ಸದಸ್ಯರು, ಕಾಲೇಜಿನ ಪ್ರಾಚಾರ್ಯ ಮತ್ತು ಉಪನ್ಯಾಸಕ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

---

# ಎಸ್‌ಡಿಎಂಸಿ ಅಧ್ಯಕ್ಷರಾಗಿ ವಿ.ಡಿ.ಸಿದ್ದನಗೌಡರ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ ನಂ-1, ರಲ್ಲಿ ಜರುಗಿದ ಎಸ್‌ಡಿಎಂಸಿ ಸದಸ್ಯರ ಹಾಗೂ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆಯು ಪಾಲಕರ ಸಭೆಯಲ್ಲಿ ಒಮ್ಮತದಿಂದ ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ವಿ.ಡಿ. ಸಿದ್ದನಗೌಡರ, ಉಪಾಧ್ಯಕ್ಷರಾಗಿ ರೇಷ್ಮಾ ನದ್ದಿಮುಲ್ಲಾ, ಸದಸ್ಯರಾಗಿ ರಮೇಶ ಮ್ಯಾಗೇರಿ, ಜಿ.ಎಂ.ಗಾಡಿ, ಇಸ್ಮಾಯಿಲ್ ಕಾಗದ, ಎಂ.ಎ.ನದ್ದಿಮುಲ್ಲಾ, ಮಂಜುನಾಥ ಗುಲಗಂಜಿ, ಬಿ.ಎಲ್.ಜಾಧವ, ಶಿವಪ್ಪ ಮಡ್ಡಿ, ಡಿ.ಎಫ್.ಸುಂಕದ, ಗೀತಾ ಕಾಳೆ, ಎಫ್.ಆರ್.ಸಿದ್ದಿ, ಆಫ್ರೀನ್ ನದ್ದಿಮುಲ್ಲಾ, ದಾವಲಬಿ ಗಾಡಿ, ಸಾವಿತ್ರಿ ಇಂಗಳಹಳ್ಳಿ, ಲಲಿತಾ



ಮಲ್ಲಿಕಾರ, ನಾಗಮ್ಮ ಕಣವಿ, ನಿರ್ಮಲಾ ಉಡಚಣ್ಣವರ ಆಯ್ಕೆಯಾದರು.

ಎಸ್.ಎಂ.ನೀಲಗುಂದ, ಬಿಆರ್‌ಸಿ ಡಿ.ಸಿ.ನದಾಫ್, ಬಿ.ವಾಯ್. ಹುಡೆದಮನಿ, ಎಸ್.ಕೆ.ಮಠಪತಿ, ಪಪಂ ಮುಖ್ಯಾಧಿಕಾರಿ ಮಂಜುನಾಥ ಗುಳೆದ, ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಮಾಹಾಂತೇಶ ನೀಲಗುಂದ, ಪಪಂ ಸದಸ್ಯ ಕೆ.ಎಲ್.ಕರಿಗೌಡರ, ಮಾಹಾದೇವಪ್ಪಾ ಗಡಾದ, ಮಲ್ಲಪ್ಪ ಚವ್ಹಾಣ, ರಾಮಣ್ಣಾ ಕಮಾಜಿ, ಶಾಲಾ ಪ್ರಧಾನ ಗುರು ಪಿ.ಬಿ.ಕೆಂಚನಗೌಡರ, ಎಂ.ಎಂ. ಮೇಗಲಮನಿ, ಕೆ.ಎಂ.ಹೆರಕಲ್ಲ ಹಾಗೂ ಪಾಲಕರು ಇದ್ದರು.

---

# ಡೆಪ್ಯುಟಿ ಸ್ಪೀಕರ್ ರುದ್ರಪ್ಪ ಲಮಾಣಿಗೆ ಅಗೌರವ: ಖಂಡನೆ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ವಿಧಾನಸಭೆಯ ಡೆಪ್ಯುಟಿ ಸ್ಪೀಕರ್ ರುದ್ರಪ್ಪ ಲಮಾಣಿ ಅವರ ಮೇಲೆ ಹಾಳೆ ಪುಸ್ತಕ ಬಿಸಾಕಿ ಅವಮಾನ ಮಾಡಿದ ಬಿಜೆಪಿ ಸದಸ್ಯರ ದುರ್ವರ್ತನೆಗೆ ಶಿರಹಟ್ಟಿ ಕರ್ನಾಟಕ ಪ್ರದೇಶ ಬಂಜಾರ ಹಾಗೂ ಶ್ರೀ ಸೇವಾಲಾಲ ಕಲ್ಯಾಣ ಸಂಘದ ತಾಲೂಕಾ ಅಧ್ಯಕ್ಷ ಈರಣ್ಣ ಚವ್ಹಾಣ ಗುರುವಾರ ಪತ್ರಿಕಾ ಪ್ರಕಟಣೆಯ ಮೂಲಕ ಖಂಡನೆ ವ್ಯಕ್ತಪಡಿಸಿದ್ದಾರೆ.

ಒಬ್ಬ ಪರಿಶಿಷ್ಟ ಜಾತಿಯ ಶಾಸಕ ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತಿರುವುದನ್ನು ಸಹಿಸದ ಈ ಜಾತಿವಾದಿಗಳು ಈ ರೀತಿಯಾಗಿ ಗೂಂಡಾಗಳಂತೆ ವರ್ತಿಸುವ ಮೂಲಕ



ತಮ್ಮಲ್ಲಿರುವ ಮನುವಾದವನ್ನು ತೋರ್ಪಡಿಸುತ್ತಿದ್ದಾರೆ. ಇಲ್ಲಿಯವರೆಗೆ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಿಕೊಳ್ಳಲಾಗದೇ ಬಿಜೆಪಿ ಪಕ್ಷ ಜನರ ಗಮನ ಬೇರೆ ಕಡೆಗೆ ತಿರುಗಿಸಲು ಈ ರೀತಿಯ ಕುತಂತ್ರ ಮಾಡುತ್ತಿದೆ ಎಂದಿದ್ದಾರೆ.

---

ಹೋಟೆಲ್ ಒಡೆಯರ ಸಂಘ ಹಾಗೂ ರೋಟರಿ ಗದಗ ಸೆಂಟ್ರಲ್ ಇವರ ಸಂಯುಕ್ತ ಆಶ್ರಯದಲ್ಲಿ ಕುಂದಾಪುರದ ಹಾಲಾಡಿ ಶ್ರೀ ಮಹಾಗಣಪತಿ ಪ್ರವಾಸಿ ಯಕ್ಷಗಾನ ಮಂಡಳಿಯವರಿಂದ ರಂಗನಾಯಕಿ ಪ್ರಸಂಗದ ಯಕ್ಷಗಾನ ಪ್ರದರ್ಶನ ಗುರುವಾರ ಸಾಯಂಕಾಲ ಗದಗ ನಗರದ ಶ್ರೀ ತೋಂಟದಾರ್ಯ ಕಲ್ಯಾಣ ಮಂಟಪದಲ್ಲಿ ನಡೆಯಿತು. ಹೋಟೆಲ್ ಒಡೆಯರ ಸಂಘದ ಅಧ್ಯಕ್ಷ ಎಚ್ ವಿಶ್ವನಾಥಶೆಟ್ಟಿ, ರೋಟರಿ ಸೆಂಟ್ರಲ್ ಅಧ್ಯಕ್ಷ ವಿಜಯ ಕುಮಾರ ಹಿರೇಮಠ ಉದ್ಘಾಟನೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ರಾಜೀವಶೆಟ್ಟಿ, ಸಂಗಮೇಶ ದುಂದೂರ, ರಾಜು ಗುಡಿಮನಿ, ಸಿದ್ದು ಯಾಪಲಪರವಿ, ಸಂತೋಷ ತೋಟಗಂಟಿಮಠ, ವಿ.ಕೆ.ಗುರುಮಠ, ಪಿ.ವಿ.ಹೆಗಡೆ, ಕಾವೇಂಶ್ರೀ, ಹೋಟೆಲ್ ಒಡೆಯರ ಸಂಘ ಹಾಗೂ ರೋಟರಿ ಗದಗ ಸೆಂಟ್ರಲ್ ಸದಸ್ಯರು ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು. ವಿಶ್ವನಾಥ ಶೆಟ್ಟಿ ಸ್ವಾಗತಿಸಿದರು. ವಿ.ಕೆ.ಗುರುಮಠ ನಿರೂಪಣೆ ಮಾಡಿದರು. ಸಂತೋಷ ತೊಟಗಂಟಿಮಠ ವಂದಿಸಿದರು.



---

### ರಾಮಗೇರಿ ಗ್ರಾಮದಲ್ಲಿ ನಡೆದ ಹರಮನೆ ಕಾರ್ಯಕ್ರಮದಲ್ಲಿ ಶೇಖಣ್ಣ ಕಾಳೆ

# ಸಾರ್ಥಕತೆಗಾಗಿ ಜಾತಿ, ಧರ್ಮದ ಬೇಧ ಬದಿಗೊತ್ತಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಭೂಮಿ ಮೇಲೆ ಜನ್ಮ ತಾಳಿದ ಪ್ರತಿಯೊಬ್ಬರೂ ತಮ್ಮ ಜೀವನದ ಶ್ರೇಷ್ಠತೆ, ಸಾರ್ಥಕತೆಗಾಗಿ ಜಾತಿ, ಧರ್ಮದ ಬೇಧ ಬದಿಗೊತ್ತಿ ಪರಸ್ಪರ ಸ್ನೇಹ, ಪ್ರೀತಿ, ಮಾನವೀಯ ಸಂಬಂಧ ಬೆಸೆಯುವ ಕಾರ್ಯ ಮಾಡಬೇಕಾಗಿದೆ ಎಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಶೇಖಣ್ಣ ಕಾಳೆ ಹೇಳಿದರು.

ತಾಲೂಕಾ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದಿಂದ ಸೋಮವಾರ ರಾಮಗೇರಿ ಗ್ರಾಮದ ಕಾಳೆ ಅವರ ನಿವಾಸದಲ್ಲಿ ನಡೆದ ಹರಮನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ನಾಡಿನ ಪುಣ್ಯಭೂಮಿಯಲ್ಲಿ ಅವತರಿಸಿದ ಶರಣರು, ಸಂತರು, ದಾಸವರೇಣ್ಯರು, ಮಹಾತ್ಮರು, ಸ್ವಾತಂತ್ರ ಹೋರಾಟಗಾರರು ಈ ನೆಲದಲ್ಲಿ ಬೇಧ-ಭಾವವಿಲ್ಲದೇ ಸಮಾನತೆ, ಮಾನವೀಯತೆ, ಸ್ನೇಹ-ಪ್ರೀತಿ ಬಿತ್ತುವ ಕಾರ್ಯ ಮಾಡಿದ್ದಾರೆ. ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆದರೆ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಮನುಷ್ಯ ಸಮಾಜಜೀವಿಯಾಗಿದ್ದು ಬದುಕಿನುದ್ದಕ್ಕೂ ಸಮಾಜದಲ್ಲಿನ ಎಲ್ಲ ವರ್ಗ, ಜಾತಿ, ಜನಾಂಗದವರೊಂದಿಗೆ ಸೌಹಾರ್ಧಯುತವಾಗಿ ಬದುಕುವ ಮನೋಧರ್ಮ ಎಲ್ಲರದ್ದಾಗಬೇಕು. ಈ ನಿಟ್ಟಿನಲ್ಲಿ ಪಂಚಮಸಾಲಿ ಸಮಾಜದ ಯುವಕರು ಸಾಮರಸ್ಯದ ಬದುಕಿಗಾಗಿ ಹರಮನೆ ಎನ್ನುವ ವಿಶಿಷ್ಟ ಕಾರ್ಯಕ್ರಮವನ್ನು ಎಲ್ಲ ಸಮಾಜಗಳ ಮನೆಗಳಲ್ಲಿ ಆಯೋಜಿಸುತ್ತಿರುವದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಬಿಆರ್‌ಪಿ ಬಿ.ಎಂ ಯರಗುಪ್ಪಿ ಅವರು ಕನಕದಾಸರ ಕುರಿತು ಉಪನ್ಯಾಸ ನೀಡಿದರು. ಈ ವೇಳೆ ತಾಲೂಕ ಕುರುಬರ ಸಂಘದ ನೂತನ ಅಧ್ಯಕ್ಷ ಶೇಖಣ್ಣ ಕಾಳೆ, ಶಂಕ್ರಣ್ಣ ಕಾಳೆ, ಬಿ.ಎಂ ಯರಗುಪ್ಪಿ ಅವರನ್ನು ಸಮಾಜದಿಂದ ಸನ್ಮಾನಿಸಲಾಯಿತು. ಪಂಚಮಸಾಲಿ ಸಂಘದ ಅಧ್ಯಕ್ಷ ಮಂಜುನಾಥ ಮಾಗಡಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಲ್ಲನಗೌಡ ಪಾಟೀಲ, ಎಸ್ ಎಫ್ ಆದಿ, ಎಸ್.ವಾಯ್ ಬೆಟಗೇರಿ, ಶಿವನಗೌಡ್ರ ಅಡ್ರಕಟ್ಟಿ, ಬೀರಪ್ಪ ಕೆರೂರ, ದೇವೇಂದ್ರಪ್ಪ ಬೆಟಗೇರಿ, ನೀಲಪ್ಪ ಕರ್ಜೆಕಣ್ಣವರ, ಮುದ್ದಪ್ಪ ಸಾಲ್ಮನಿ, ದ್ಯಾಮಣ್ಣ ಕಮತದ, ಫಕ್ಕೀರೇಶ ಕವಲೂರ, ವೀರೇಂದ್ರಕುಮಾರ ಕಟಗಿ, ಫಕ್ಕಿರಪ್ಪಾ ಕಾಳೆ, ಗುರುರಾಜ ಪೂಜಾರ, ರಾಜು ಮಡಿವಾಳರ, ಜಗದೀಶ ಕುಮಸಿ, ಅಶೋಕ ಹಿತ್ತಲಮನಿ, ಮಾರ್ತಾಂಡಪ್ಪ ಗಂಜಿಗಟ್ಟಿ, ಪ್ರಮೋದ ಬನ್ನಿಕೊಪ್ಪ, ಬಸಣ್ಣ ಬನ್ನಿಕೊಪ್ಪ, ರಾಜು ಲಿಂಬಿಕಾಯಿ, ಮಾಂತೇಶ ಗೋಡಿ, ಮಲ್ಲಿಕಾರ್ಜುನ ನಿರಲೋಟಿ ಇತರಿದ್ದರು. ನಾಗರಾಜ ಕಳಸಾಪುರ, ಗಂಗಾಧರ ಗುಡಗೇರಿ, ಮಂಜುನಾಥ ಕೊಕ್ಕರಗುಂದಿ, ಚಂದ್ರು ಮಾಗಡಿ ನಿರೂಪಿಸಿದರು.

---

# ಶಾಲೆಯ ಪ್ರತಿಯೊಂದು ವಸ್ತುವನ್ನೂ ಪ್ರೀತಿಯಿಂದ ಕಾಣಿ



■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪಟ್ಟಣದ ಸರಕಾರಿ ಉರ್ದು ಪ್ರೌಢಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಂ ಜಿ ಚಾರಿಟೇಬಲ್ ಟ್ರಸ್ಟ್, ಹುರೇರ್ರಾ ಮಸೀದ್ ಗಂಗಿಮಡಿಯ ಕಾರ್ಯದರ್ಶಿ ಮೌಲಾನಾ ಅಬ್ದುಲ್ ಗಫೂರ್ ಪಲ್ಲೇದಡಿ ನೇತೃತ್ವದಲ್ಲಿ ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ, ಶಾಲಾ ಬ್ಯಾಗ್‌ಗಳನ್ನು ವಿತರಿಸಲಾಯಿತು.

ಮೌಲಾನಾ ಅಬ್ದುಲ್ ಗಫೂರ್ ಮಾತನಾಡಿ, ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣದ ಉದ್ದೇಶದಿಂದ ಶಾಲಾ ಮಕ್ಕಳಿಗೆ ಬ್ಯಾಗ್‌ಗಳನ್ನು ವಿತರಣೆ ಮಾಡಲಾಗಿದೆ. ಶಾಲೆಯ ಪ್ರತಿಯೊಂದು ವಸ್ತವನ್ನೂ ಪ್ರೀತಿಯಿಂದ ಕಾಣಬೇಕು. ಈಗಾಗಲೇ ಟ್ರಸ್ಟ್ ವತಿಯಿಂದ ಶೈಕ್ಷಣಿಕವಾಗಿ ವಿದ್ಯಾರ್ಥಿಗಳನ್ನು ಸದೃಢಗೊಳಿಸಲು 28 ಲಕ್ಷ ರೂಪಾಯಿಗಳ ವಿದ್ಯಾರ್ಥಿವೇತನವನ್ನು ನೀಡಲಾಗಿದೆ ಎಂದರು.

ಸೈಯ್ಯದ್ ಖಾಲಿದ್ ಕೊಪ್ಪಳ ಮಾತನಾಡಿ, ವಿದ್ಯಾರ್ಥಿಗಳು ಶಾಲೆಯಲ್ಲಿ ಪಾಠವನ್ನು ಚೆನ್ನಾಗಿ ಅಭ್ಯಾಸ ಮಾಡಿ, ಇಂತಹ ಶಾಲಾ ಸಾಮಗ್ರಿಗಳ ದೇಣಿಗೆ ಪಡೆದು, ಶೈಕ್ಷಣಿಕವಾಗಿ ಭವಿಷ್ಯವನ್ನು ರೂಪಿಸಿಕೊಂಡು ಉತ್ತಮ ಸಾಧನೆ ಮಾಡಲು ಸಾಧ್ಯವಾಗಲಿದೆ ಎಂದರು.

ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಗಂಗಾಧರ ಅಣ್ಣಿಗೇರಿ ಮಾತನಾಡಿ, ಟ್ರಸ್ಟ್ ನೀಡುತ್ತಿರುವ ನೋಟ್ ಪುಸ್ತಕ, ಬ್ಯಾಗ್‌ಗಳನ್ನು ಸರಿಯಾಗಿ ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ನಾಗರಾಜ ಹಳ್ಳಿಕೇರಿ, ಮಹ್ಮದ ಶಫಿ ಯರಗುಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಅಂಜುಮನ್ ಅಧ್ಯಕ್ಷ ಮಹಬೂಬ ಹವಾಲ್ದಾರ, ರೆಹಮಾನಸಾಬ ಮಲ್ಲನಕೇರಿ, ನಜೀರ್ ಅಹ್ಮದ ಅಳವಂಡಿ, ಅಲ್ಲಾವುದ್ದೀನ್ ಬನ್ನಿಗೋಳ, ಮಹಬೂಬಸಾಬ ಮುಲ್ಲಾ, ಮರ್ದಾನ್ ಬಿಸನಳ್ಳಿ, ಸಿರಾಜ್ ಡಂಬಳ, ಅಲ್ಲಾಭಕ್ಷಿ ಅಳವಂಡಿ, ಮಹಬೂಬ ಬೆಟಗೇರಿ, ಮೌಲಾನಾ ಸಾದೀಕ್ ಮದನಿ, ಬಾಷಾ ಪಟೇಲ್ ಖಾನಗೌಡ, ಹನುಮರೆಡ್ಡಿ ಇಟಗಿ, ಚಾಂದಸಾಬ ಎಲಿಗಾರ, ಶರ್ಫುನ್ನೀಸಾ, ಎಸ್ ಎ ಹಣಗಿ, ವಿ ಎಫ್ ಮೆಣಸಿನಕಾಯಿ ಮುಂತಾದವರಿದ್ದರು.

---

# ಬಿಜೆಪಿ, ಜೆಡಿಎಸ್ ಶಾಸಕ ಪ್ರತಿಭಟನೆ: ರಾಜ್ಯಪಾಲರಿಗೆ ದೂರು

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬಿಜೆಪಿಯ ಹತ್ತು ಶಾಸಕರನ್ನು ಅಮಾನತು ಮಾಡಿರುವ ಸ್ಪೀಕರ್ ನಡೆಯನ್ನು ಖಂಡಿಸಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ಸದಸ್ಯರು ವಿಧಾನಸೌಧದ ಬಳಿ ಇರುವ ಗಾಂಧಿ ಪ್ರತಿಮೆ ಎದುರು ಗುರುವಾರ ಪ್ರತಿಭಟನೆ ನಡೆಸಿ, ಜೆಡಿಎಸ್ ಸದಸ್ಯರ ಜೊತೆ ಸೇರಿ ರಾಜ್ಯಪಾಲರಿಗೆ ದೂರು ಸಲ್ಲಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಶಾಸಕರಾದ ಎಸ್ ಸುರೇಶ್ ಕುಮಾರ್, ಮುನಿರತ್ನ ನಾಯ್ಡು, ಎಂ ಚಂದ್ರಪ್ಪ, ಬಿ ಪಿ ಹರೀಶ್, ಎಂಎಲ್‌ಸಿ ಎನ್ ರವಿಕುಮಾರ್, ಮಾಜಿ ಸಿಎಂ ಎಚ್‌ಡಿ ಕುಮಾರಸ್ವಾಮಿ, ಶಾಸಕರಾದ ಜಿ ಟಿ ದೇವೇಗೌಡ, ಎ ಮಂಜು, ಎಂಎಲ್‌ಸಿಗಳಾದ ಬೋಜೆಗೌಡ, ಟಿ ಎ ಶರವಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

---

ಬ್ಯಾಂಕ್ ಆಫ್ ಬರೋಡ ಸ್ಥಾಪನೆಯಾಗಿ 116 ನೇ ವರ್ಷಾಚರಣೆ ಅಂಗವಾಗಿ ಸರ್ಕಾರಿ ಶಾಲಾ ಮಕ್ಕಳಿಗಾಗಿ ಶುದ್ಧ ಕುಡಿಯುವ ನೀರಿನ ಫಿಲ್ಟರ್‌ನ್ನು ಬಸವೇಶ್ವರ ನಗರದ 4ನೇ ನಂಬರಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ದೇಣಿಗೆ ರೂಪದಲ್ಲಿ ನೀಡಲಾಯಿತು. ಬ್ಯಾಂಕ್‌ನ ಹಿರಿಯ ವ್ಯವಸ್ಥಾಪಕರಾದ ರಬ್ಬಾನಿ ಹಾಗೂ ಸಿಬ್ಬಂದಿ ಇದ್ದರು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಜಯಶ್ರೀ ವರೂರ, ಮುಖ್ಯೋಪಾಧ್ಯಾಯರಾದ ಎಸ್.ಕೆ.ಮಂಗಳಗುಡ್ಡ, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಪ್ರಕಾಶ ಮಂಗಳೂರು, ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ರವಿ ಹೆಬ್ಬಳ್ಳಿ ಹಾಗೂ ಶಾಲೆಯ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka